# ಸಂಪಾದಕೀಯ...





## ಯಶಸ್ಸಿನ ಹೆಜ್ಜೆ ಮಾನವನ ಪ್ರಗತಿ!!

ಪ್ರತಿಯೊಬ್ಬ ವ್ಯಕ್ತಿ, ಸಂಸ್ಥೆ, ಸಮುದಾಯ ಯಶಸ್ಸಿನ ಹೆಜ್ಜೆಗಾಗಿ ಹಂತ ಹಂತವಾಗಿ ಹಾತೊರೆಯುತ್ತಾರೆ; ಶ್ರಮ ಪಡುತ್ತಾರೆ. ಈ ಶ್ರಮವನ್ನು ಒಲಿಸಿಕೊಳ್ಳಲು ಹಲವು ವಿಧಗಳಲ್ಲಿ ಪ್ರಯತ್ನ ಪಡುತ್ತಾರೆ. ಕೆಲವರಿಗೆ ಈ ಯಶಸ್ಸಿನ ಹೆಜ್ಜೆ ಸುಲಭದಲ್ಲಿ ಹಾಗೂ ಅತ್ಯಲ್ಪ ಕಾಲದಲ್ಲಿಯೇ ದೊರಕಿದರೆ, ಕೆಲವರಿಗೆ ಸಾಕಷ್ಟು ಸಮಯದ ನಂತರ ದೊರಕಬಹುದು. ಕೆಲವರಿಗೆ ಈ ಯಶಸ್ಸಿನ ಹೆಜ್ಜೆ ಮರೀಚಿಕೆಯಾಗಿಯೇ ಉಳಿಯುತ್ತದೆ. ಕೆಲವರು ಸದಾ ಯಶಸ್ಸಿನ ಕುದುರೆಯ ಮೇಲೆ ಸವಾರಿ ಮಾಡುತ್ತಾರೆ. ಯಶಸ್ಸು ಎಂದಾಕ್ಷಣ ನಮ್ಮ ಮನಸ್ಸಿನಲ್ಲಿ ಬರುವುದು ಯಾವುದೇ ಪರೀಕ್ಷೆ ಸಂದರ್ಭದಲ್ಲಿ ಜಯಗಳಿಸುವುದು, ಅಪಾರ ಸಂಪತ್ತು, ಕೀರ್ತಿ ಸ್ಥಾನ–ಮಾನ, ಗೌರವವನ್ನು ಗಳಿಸುವುದು; ಸಂಸ್ಥೆಯಾದರೆ, ಅದು ಬೆಳೆದು ರಾಜ್ಯದಲ್ಲಿ, ರಾಷ್ಟ್ರದಲ್ಲಿ ಹಾಗೂ ಜಾಗತಿಕ ಮಟ್ಟದಲ್ಲಿ ಬೆಳೆಯುವುದು ಮತ್ತು ಅಪಾರ **ಸಂಪತ್ತು** ಗಳಿಸುವುದು. ಆದರೆ ಯಶಸ್ಸು ಇಷ್ಟೆ ಅಲ್ಲ. ಅದನ್ನು ಬೇರೆ ಬೇರೆ ಮಟ್ಟದಲ್ಲಿ ನೋಡ ಬೇಕಾಗುತ್ತದೆ. ಮೂಲಭೂತವಾಗಿ ಯಶಸ್ಸಿನ ಹೆಜ್ಜೆ ಹತ್ತಾರು ರೀತಿಯಲ್ಲಿ. ವಿಜ್ಞಾನಿ ಥಾಮಸ್ ಅಳ್ವಾ ಎಡಿಸನ್ ಹೇಳುವಂತೆ: "Success is the result of inspiration, aspiration, desperation and perspiration" ಆದುದರಿಂದ ಯಶಸ್ಸಿನ ಹೆಜ್ಜೆ ತುಳಿಯಬೇಕಾದರೆ ಹಾಗೂ ತಿಳಿಯಬೇಕಾದರೆ ಮೊದಲು ಸತ್ಯ ಏನೆಂದರೆ ಸರ್ವರಿಗೂ ಸರ್ವಕಾಲಕ್ಕೂ ಅನ್ವಯಿಸುವಂತೆ ಯಶಸ್ಸನ್ನು ವಿವರಿಸಲು ಸಾಧ್ಯವಿಲ್ಲ. ಸರಿಯಾದ ಪರಿಶ್ರಮ ಹಾಗೂ ನಿರಂತರ ಸಾಧನೆ ಇವೆ ಯಶಸ್ಸಿನ ಗುಟ್ಟು. ಈ ನಿಟ್ಟಿನಲ್ಲಿ ನಮ್ಮ ದೇಶದ ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಮಾತಿನಲ್ಲಿ "If you Salute your duty, you need not Salute anybody, If you Pollute your duty, you need to Salute everybody."

ವಿಮುಕ್ತಿ ಮಕ್ಕಳಲ್ಲಿ ಹುದುಗಿವೆ ಅನರ್ಘ್ಯ ಮುತ್ತುಗಳು, ಅವುಗಳನ್ನು ಹೊರತೆಗೆಯುವ ಹೊರತು ಅವು ಮುತ್ತುಗಳು ಎನಿಸುವುದಿಲ್ಲ. ಮುತ್ತುಗಳಿಗಾಗಿ ಸಮುದ್ರದ ಆಳಕ್ಕೆ ಯಾರಾದರೊಬ್ಬರು ಇಳಿದು ಹುಡುಕಾಟ ನಡೆಸಿ ಬೆಳಕಿಗೆ ತಂದಾಗ ಮಾತ್ರ ಅವು ಮಹತ್ವ ಪಡೆದುಕೊಳ್ಳುವುವು. ಅಂತಹ ದಿಟ್ಟ ಹೆಜ್ಜೆಯನ್ನು, ವಿಮುಕ್ತಿ ಮಕ್ಕಳು ಹೆಜ್ಜೆ ಇಡಲು ಪ್ರಯತ್ನಿಸಿ, ಹೆಜ್ಜೆ ಇಟ್ಟಿದ್ದರೆ. "The child educates his parents the pupil educates his teacher" ಈ ಮಾತು ನಮ್ಮ ವಿಮುಕ್ತಿ ಮಕ್ಕಳ ಹೆಜ್ಜೆ ಎಂಬ ಹೊತ್ತಿಗೆಯಲ್ಲಿ ಓದಬಹುದು. ಮಕ್ಕಳಲ್ಲಿನ ಲವಲವಿಕೆ, ಉತ್ಸಾಹ, ಜೀವನದ ಪ್ರೀತಿ, ಓದುವಿಕೆಯಲ್ಲಿ ಆಸಕ್ತಿ, ಸಲಹೆಗಳನ್ನು ಸ್ವೀಕರಿಸುವ ಮನೋಭಾವ, ಅವರಲ್ಲಿರುವ ಅಂತಸತ್ವವನ್ನು ಹೊರಹೊಮ್ಮಿಸಲು ಪ್ರೇರೇಪಿಸಿತು.

ಒಂದು ಮಗುವಿನ ಭವಿಷ್ಯವು ಆದರ ಶಾಲಾ ಕೊಠಡಿಗಳ ಮಧ್ಯೆ ರೂಪಿಸಲ್ಪಡುತ್ತದೆ ಎನ್ನುವುದು ಹಲವು ಮಹನೀಯರ ಅಭಿಮತ. ಈ ಹೇಳಿಕೆಯನ್ನು ಪಾಲಿಸುತ್ತಿರುವ ವಿಮುಕ್ತಿ ಸಂಸ್ಥೆ ನುರಿತ ಸಿಬ್ಬಂದಿ ವರ್ಗದವರ ಉತ್ಸಾಹ ಪೂರ್ಣ ಪರಿಶ್ರಮ ಪ್ರಯತ್ನ ಹಾಗೂ ಸೇವೆ ಅಭಿನಂದನಾರ್ಹ.


ಕಳೆದ ಎರಡು ವರ್ಷಗಳಲ್ಲಿ ಪೊತ್ನಾಳದ ಸುತ್ತಮುತ್ತಲಿರುವ 15 ಸರಕಾರಿ ಶಾಲೆಗಳ ಮಕ್ಕಳ ಅಭಿವೃದ್ಧಿ ಕಾರ್ಯಗಳಲ್ಲಿ ಹೆಜ್ಜೆ ಹಾಕಿ ಮಕ್ಕಳಲ್ಲಿರುವ ಸುಪ್ತ ಹಾಗೂ ರಚನಾತ್ಮಕ ಪ್ರತಿಭೆಗಳನ್ನು ಗುರುತಿಸಿ ಅವರ ಆಸಕ್ತಿ, ಸಾಮರ್ಥ್ಯ ಹಾಗೂ ಅವಶ್ಯಕತೆಗಳಿಗೆ ಸ್ಪಂಧಿಸಿ, ಅವರ ಕೌಶಲ್ಯ ಹಾಗೂ ಜ್ಞಾನದ ಮಟ್ಟವನ್ನು ಉನ್ನತಿಗೇರಿಸುವ ಕರ್ತವ್ಯ ನಿರ್ವಹಿಸುತ್ತದೆ. ಈ ನಿಟ್ಟಿನಲ್ಲಿ ಮಕ್ಕಳಿಗೆ ಪ್ರೋತ್ಸಾಹ ನೀಡಿ ಅವರೊಳಗಿನ ಪ್ರತಿಭೆಗೆ ಸುಂದರ ರೂಪ ನೀಡುವ ಪ್ರಯತ್ನವೇ ವಿಮುಕ್ತಿ ಮಕ್ಕಳ ಹೆಜ್ಜೆಯ ಗುರಿ. ಈ ದಿಶೆಯಲ್ಲಿ ಪ್ರಥಮ ಸಂಚಿಕೆ "ವಿಮುಕ್ತಿ ಮಕ್ಕಳ ಹೆಜ್ಜೆ" ಹೊರತರುತ್ತಿದ್ದು ಈ ಸಂಚಿಕೆಗೆ ಕವನ ಲೇಖನಗಳನ್ನು ಬರೆದುಕೊಟ್ಟಿರುವ ಶಿಕ್ಷಕರಿಗೆ, ಸಿಬ್ಬಂದಿಗಳಿಗೆ, ವಿದ್ಯಾರ್ಥಿಗಳಿಗೆ ಹಾಗೂ ದಾನಿ ಸಂಸ್ಥೆಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತೇನೆ.




**ವಂ| ಫಾ| ಸತೀಶ್ ಫೆರ್ನಾಂಡಿಸ್**
**ನಿರ್ದೇಶಕರು, ವಿಮುಕ್ತಿ**

***ಆತ್ಮ ವಿಶ್ವಾಸವೇ ಯಶಸ್ಸಿನ ಗುಟ್ಟು–ಎಮರ್ಸನ್***







❖ ಒಟ್ಟು 14 ಹಳ್ಳಿಗಳು ❖ ಒಟ್ಟು ಮಕ್ಕಳು 835 & ಒಟ್ಟು ಮಕ್ಕಳ ಸಂಘ 30 ❖ ಒಟ್ಟು ವಲಯಗಳು 4

# ಜೀವನದಲ್ಲಿ ಕಾಲ ಪ್ರಜ್ಞೆಯ ಕಲೆ



**ಜೀ**ವನ ಮಾನವನಿಗೆ ಲಭಿಸಿದ ಆದ್ವಿತೀಯ ಕೊಡುಗೆ. ಸಮಯ ದ್ವಿತಿಯ ಕೊಡುಗೆ. ಕಾಲವೊಂದು ಮಹಾನ್ ವೈದ್ಯ. ಸಮಯವೇ ಹೊನ್ನು ಇದೊಂದು ಕಾಲಚಕ್ರ. ಅದು ತನ್ನ ಪಾಡಿಗೆ ತಿರುಗುತ್ತಲೇ ಇರುತ್ತದೆ. ಇಂದು ನಾಳೆ ನಾಡಿದ್ದು ಎಂಬ ದಿನಗಳು ಮರೆಯಾಗುತ್ತಲೇ ಇರುತ್ತವೆ. ಹಾಗೆಯೇ ಮನುಷ್ಯನ ದಿನಗಳು ಹತ್ತಿರ ದೂರವಾಗುತ್ತಲೇ ಹೋಗುತ್ತದೆ. ಸಮಯ ಯಾರ ಸೊತ್ತು ಅಲ್ಲ: ಯಾರಿಗೂ ಕಾಯುವುದಿಲ್ಲ. ಅದಕ್ಕೆ ನಾವೇ ಕಾಯಬೇಕು. ಮುತ್ತಿಗಿಂತ ಹೊತ್ತು ಉತ್ತಮ.ಸಮಯದ ಮಹತ್ವ ಅರಿಯದೇ ಮನುಜ ಸರ್ವರಲ್ಲಿ ಅದಮ. ಮುತ್ತು ಕಳೆದರೆ ಪಡೆಯಬಹುದು. ಹೊತ್ತು ಹೋದ ಕ್ಷಣವನ್ನು ಪಡೆಯಲು ಸಾಧ್ಯವಿಲ್ಲ. ಏಕೆಂದರೆ ಸಮಯದ ಹಾಗೂ ಸಮುದ್ರದ ಉಬ್ಬರ– ಇಳಿತ ಯಾರಿಗಾಗಿಯೂ ಕಾಯುವುದಿಲ್ಲ. ವೇಳೆಗೆ ರಜೆ ಇಲ್ಲ. ಕೆಲಸವಿರಲಿ– ಬಿಡುವಿರಲಿ, ಮಳೆಯಿರಲಿ– ಗಾಳಿಯಿರಲಿ, ಬಿಸಿಲಿರಲಿ –ಚಳಿಯಿರಲಿ ಸಮಯ ಮುನ್ನಡೆಯದೇ ಇರದು. ಕಾಲವನ್ನು ವ್ಯರ್ಥವಾಗಿ ಕಳೆದರೆ ಶಾಶ್ವತವಾಗಿ ಕಳೆದು ಕೊಂಡಂತೆ. ಸಮಯವನ್ನು ಕೊಂದರೆ ಆತ್ಮಹತ್ಯೆ ಮಾಡಿ ಕೊಂಡಂತೆ.

ಸಮಯ ಕಾಯುವವನಿಗೆ ತುಂಬಾ ವಿಶ್ವಾಸ, ಹೆದರುವವನಿಗೆ ತುಂಬಾ ಶೀಘ್ರ, ಕೊರಗುವವನಿಗೆ ತುಂಬಾ ದೀರ್ಘ, ನಗುವವನಿಗೆ ತುಂಬಾ ಸಂಕ್ಷಿಪ್ತ ಪ್ರೀತಿಸುವವನಿಗೆ ಶಾಶ್ವತ, ಸಮಯ ಜಗತ್ತಿನಲ್ಲಿಯೇ ಅತ್ಯಂತ ಉದ್ದವಾದ ವಿಷಯ, ಚಿಕ್ಕದಾದ ವಿಷಯವೂ ಕೂಡ. ಅಧಿಕ ವಿಭಾಗಿಸ ತಕ್ಕ ವಿಷಯ, ಅಧಿಕ ಆಲಸಿ ವಿಷಯವೂ ಕೂಡ. ಅಧಿಕ ವಿಸ್ತರಿಸಬಹುದಾದ ವಿಷಯವೂ ಕೂಡ. ಅತ್ಯಂತ ಅಲಕ್ಷಿಸಲ್ಪಟ್ಟ ಹಾಗೂ ವಿಷಾದ ಪಡುವ ವಿಷಯವೂ ಕೂಡ. ನಾವು ಖರ್ಚು ಮಾಡಬಹುದಾದ ಬೆಲೆ ಬಾಳುವ ವಿಷಯ ಸಮಯ ನಮಗೆ ಬೇಕಾಗುವ ಅತ್ಯ ಅಮೂಲ್ಯ ವಿಷಯ ಸಮಯ. ನಾವು ಕೆಟ್ಟ ರೀತಿಯಲ್ಲಿ ಉಪಯೋಗಿಸುವ ವಿಷಯ ಕೂಡ ಸಮಯ.



ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವೇನು ಎನ್ನುವ ಗಾದೆ ತಿಳಿಸುತ್ತದೆ. ನಾವು ಆಗಿ ಹೋದ ವಿಷಯಗಳಿಗಾಗಿ ತಲೆ ಕೆಡಿಸಿಕೊಳ್ಳುತ್ತೇವೆಯೇ ವಿನ: ನಾಳೆ ಭವಿಷ್ಯದ ದಿನಗಳಲ್ಲಿ ಕೆಲಸ ಕಾರ್ಯಗತ ಮಾಡಲು ಗಮನ ಹರಿಸುವುದಿಲ್ಲ. ಇದಕ್ಕೆ ಕಾರಣ ಮನುಷ್ಯನಲ್ಲಿ ಅಡಗಿದ್ದ ಸೋಮಾರಿತನ. ಪ್ರಸ್ತುತ ದಿನಗಳಲ್ಲಿ ಸಮಯಕ್ಕೆ ಹೆಚ್ಚಿನ ಮಹತ್ವವಿದೆ. ಇಂದಿನ ವಿಧ್ಯಾರ್ಥಿ, ಯುವಕರು ಸಮಯ ಪ್ರಜ್ಞೆ ಬಗ್ಗೆ ಅರಿತುಕೊಳ್ಳಬೇಕು. ಶಾಲಾ–ಕಾಲೇಜುಗಳಲ್ಲಿ ಹೇಳಿದ ಪಠ್ಯ ವಿಷಯವನ್ನು ಇಂದೆ ಮುಗಿಸಿ, ನಾಳೆ ಮಾಡುತ್ತೇನೆ. ಎನ್ನುವುದಕ್ಕೆ ವಿಧಾಯ ಹೇಳಿ. ನಾಳೆ ಎಂದವನ ಮನೆ ಹಾಳು ಎಂಬುದನ್ನು ನೆನಪಿಟ್ಟುಕೊಳ್ಳಿ. ಇತ್ತೀಚಿನ ವಿಧ್ಯಾರ್ಥಿಗಳಲ್ಲಿ ನಾಳೆ ಎನ್ನುವ ಭಾವ ಮೈಗೂಡುತ್ತಿದೆ. ಇಂತಹ ಭಾವನೆಯನ್ನು ಹೊಡೆದೊಡಿಸಿ.

ಸಮಯದ ಮಹತ್ವ ಅರಿತು ಸಂದರ್ಭಕ್ಕೆನುಗುಣವಾಗಿ ಓದು, ಬರಹ, ಕ್ರೀಡೆ, ವ್ಯಾಯಾಮಗಳತ್ತ ಗಮನ ಹರಿಸುವುದು ಒಳಿತು. ನೀನು ಜೀವನವನ್ನು ಪ್ರೀತಿಸುತ್ತೀಯಾ ಆದರೆ ಸಮಯ ವ್ಯರ್ಥ ಮಾಡಬೇಡ. ಜೀವನ ಸಾರವೇ ಸಮಯ. ಚಿಕ್ಕ ಮಕ್ಕಳಿಂದ ಹಿಡಿದು ಮುದಿ ಪ್ರಾಯದವರಿಗೂ ಕೂಡ ಭೀಝಿ ಅಥವಾ ಟೈಮ್ ಇಲ್ಲ ಎಂದು ಹೇಳುತ್ತಿರುತ್ತಾರೆ. ಒಂದು ದಿವಸಕ್ಕೆ ೨೪ ಘಂಟೆಗಳಿದ್ದರೂ ಕೆಲವರಿಗೆ ಸಮಯ ವಿದೆ. ಇನ್ನೂ ಕೆಲವರಿಗೆ ಸಮಯವಿಲ್ಲ ಎಂಬುದರ ರಹಸ್ಯವೇನು? ಇದಕ್ಕೆ ಉತ್ತರ ಬಹಳ ಸುಲಭ ಬುದ್ದಿವಂತರು ಸಮಯವನ್ನು ನಿಭಾಯಿಸಲು ಶಕ್ತರಾದರೆ ಅಲಸಿಗಳು ಬುದ್ದಿ ಹೀನರು ಸಮಯವನ್ನು ನಿಭಾಯಿಸಲು ಆಶಕ್ತರು. ಮನಸ್ಸಿದ್ದಲ್ಲಿ ಮಾರ್ಗವಿದೆ. ಚಾರ್ಲ್ ಬರ್ಟನ್ ಹೇಳುವಂತೆ ಸಮಯ ನಿನಗೆ ಸಿಗಲಾರದು. ಸಮಯ ನಿನಗೆ ಬೇಕಾದರೆ ಮಾಡಿಕೊಳ್ಳಬೇಕು.

ಒಂದು ವರ್ಷದ ಮಹತ್ವವನ್ನು ಅರಿಯಲು ಒಂದು ತರಗತಿಯಲ್ಲಿ ಫೇಲಾದ ವಿಧ್ಯಾರ್ಥಿಗಳನ್ನು ಕೇಳಿ. ಒಂದು ತಿಂಗಳ ಮಹತ್ವವನ್ನು ಅರಿಯಲು ಪ್ರಿಮೇಚುರಲ್ ಮಗು ಹುಟ್ಟಿದ ತಾಯಿಯನ್ನು ಕೇಳಿ. ಒಂದು ವಾರದ ಮಹತ್ವವನ್ನು ಅರಿಯಲು ವಾರಪತ್ರಿಕೆಯ ಸಂಪಾದಕರನ್ನು ಕೇಳಿ. ಒಂದು ದಿವಸದ ಮಹತ್ವವನ್ನು ಅರಿಯಲು ಚಂಡಮಾರುತಕ್ಕೆ ಬಲಿಯಾದ ಒಂದು ಕುಟುಂಬವನ್ನು ಕೇಳಿ. ಒಂದು ಘಟನೆಯ ಮಹತ್ವವನ್ನು ಅರಿಯಲು ಒಬ್ಬರನ್ನೊಬ್ಬರು ಭೇಟಿಯಾಗಲು ಕಾಯುತ್ತಿರುವ ಪ್ರೇಮಿಗಳನ್ನು ಕೇಳಿ. ಒಂದು ನಿಮಿಷದ ಮಹತ್ವವನ್ನು ಅರಿಯಲು ರೈಲು ತಪ್ಪಿದ ಪ್ರಯಾಣಿಕನನ್ನು ಕೇಳಿ. ಒಂದು ಸೆಕೆಂಡಿನ ಮಹತ್ವವನ್ನು ಅರಿಯಲು ಒಂದು ಅಪಘಾತದಿಂದ ಪಾರಾದ ವ್ಯಕ್ತಿಯನ್ನು ಕೇಳಿ. ಒಂದು ಮಿಲಿ ಸೆಕೆಂಡಿನ ಮಹತ್ವವನ್ನು ಅರಿಯಲು ಒಲಿಂಪಿಕ್ಸನಲ್ಲಿ ಬೆಳ್ಳಿ ಪದಕವನ್ನು ಪಡೆದ ವ್ಯಕ್ತಿಯನ್ನು ಕೇಳಿ.


ನಿರ್ವಹಿಸುವ ಕಾರ್ಯ ಒಂದಿದ್ದರೆ ಇಂದೇ ನಿರ್ವಹಿಸಬೇಕು. ಹಾಡುವ ಹಾಡೊಂದಿದ್ದರೆ ಇಂದೇ ಹಾಡಬೇಕು: ನುಡಿಯುವ ನುಡಿಯೊಂದಿದ್ದರೆ ಇಂದೇ ನುಡಿಯಬೇಕು: ನಗುವ ನಗುವೊಂದಿದ್ದರೆ ಇಂದೇ ನಗಬೇಕು: ಏಕೆಂದರೆ ಇಂದು ನಮ್ಮದು ನಾಳೆ ನಮ್ಮದಲ್ಲ. ಸಮಯದ ಕುರಿತು ಈ ಮಾತುಗಳು ಸರ್ವಕಾಲಕ್ಕೆ ನಿಜ. ನಿನ್ನೆ ಎಂಬುದು ಇಂದು ನಮಗೊಂದು ಕನಸು? ನಾಳೆ ಎಂಬುದು ಇಂದೇ ನಮಗೊಂದು ಭ್ರಮೆ, ಇಂದು ಇಂದಾದರೆ ನಿನ್ನೆಯ ಕನಸು ನನಸಾಗುವುದು, ನಾಳೆಯ ಭ್ರಮೆ ಭರವಸೆಯಾಗುವುದು ಸಮಯವನ್ನು ಸಮರ್ಪಕವಾಗಿ ಯೋಜಿಸೋಣ. ಸಮಯ ಉಳಿಸೋಣ ಯಶಸ್ವಿನತ್ತ ಸಾಗೋಣ ಸಮಯಕ್ಕೆ ಬೆಲೆಕೊಡೋಣ ಸಮಯ ಪ್ರಜ್ಞೆಯನ್ನು ಬೆಳೆಸೋಣ.

**ಫಾ। ಸತೀಶ್ ಫೆರ್ನಾಂಡಿಸ್**

***ಸಮಯವನ್ನು ಸಮರ್ಪಕವಾಗಿ ಯೋಜಿಸಿದರೆ ಸಮಯ ಉಳಿಸಿದಂತೆ – ಫ್ರಾನ್ಸಿಸ್ ಬ್ಯಾಕನ್***



# ಬಾಲಕಾರ್ಮಿಕತೆ



ಬಾಲಕಾರ್ಮಿಕತೆ ಒಂದು ಸಾಮಾಜಿಕ ಕಳಂಕ. ಈ ಸಮಸ್ಯೆಗೆ ಸಮಾಜದ ಪ್ರತಿಯೊಬ್ಬರು ಕಾರಣ. ಈ ಅಮಾನವೀಯ ಪದ್ದತಿಯ ನಿರ್ಮೂಲನೆಗೆ ಸಮಾಜದ ಎಲ್ಲಾ ವರ್ಗದವರು ಒಟ್ಟಾಗಿ ಸಂಘಟಿತ ಪ್ರಯತ್ನದಲ್ಲಿ ಮುಂದೆ ಬಂದು ಮಕ್ಕಳನ್ನು ಶಾಲೆಗೆ ದಾಖಲಿಸುವ ಮುಖಾಂತರ ಶ್ರಮಿಸಬೇಕು. ಮಕ್ಕಳಿಗೆ ಅವರದೇ ಆದ ಕನಸು ಮತ್ತು ಹಕ್ಕುಗಳಿವೆ. ಅದನ್ನು ಅರಿತು ಎಲ್ಲರಿಗೂ ಜಾಗ್ರತಿ ಮೂಡಿಸುವ ಕರ್ತವ್ಯ ನಮ್ಮೆಲ್ಲರದು.

## ಬಾಲಕಾರ್ಮಿಕರೆಂದರೆ ಯಾರು?

೧೮ ವರ್ಷದೊಳಗಿನ ಯಾವ ಮಗು ಶಾಲೆಯಲ್ಲಿ ಇಲ್ಲವೋ ಅವರೆಲ್ಲರೂ ಬಾಲಕಾರ್ಮಿಕರು. ೧೮ ವರ್ಷದೊಳಗಿನ ಮಕ್ಕಳು ಶಾಲೆಯಿಂದ ಹೊರಗಿದ್ದು ತನ್ನ ಬೌದ್ಧಿಕ, ಮಾನಸಿಕ, ಶಾರಿರೀಕ, ಸಾಮಾಜಿಕ ಮತ್ತು ಭಾಷೆ ಬೆಳವಣಿಗೆಗಳಿಗೆ ತೊಡಕಾಗುವ ಯಾವುದೇ ಚಟುವಟಿಕೆಯಲ್ಲಿದ್ದು ತನ್ನ ಮೂಲಭೂತ ಹಕ್ಕುಗಳಿಂದ ವಂಚತರಾಗಿದ್ದಾರೆ ಅವರೆಲ್ಲರು ಬಾಲಕಾರ್ಮಿಕರು ಎಂದೆನಿಸಿಕೊಳ್ಳುತ್ತಾರೆ.

ಮಕ್ಕಳು ದುಡಿಯುವ ಕ್ಷೇತ್ರಗಳು:– ಮಂಡಕ್ಕಿ ಬಟ್ಟಿ, ಗ್ಯಾರೇಜು, ಹೋಟೆಲ್, ಹೊಲಗದ್ದೆಗಳಲ್ಲಿ ಕೂಲಿ ಕೆಲಸ, ಜೀತಪದ್ದತಿ, ದನ,ಕುರಿ, ಮೇಯಿಸುವುದು, ಬೆಂಕಿ ಪೆಟ್ಟಿಗೆ ತಯಾರಿಕೆ, ಪಟಾಕಿ, ಕಲ್ಲಿನ ಗಣಿ, ಮೀನುಗಾರಿಕೆ, ಕೈಮಗ್ಗ, ಹತ್ತಿ ಉಡುಪು ತಯಾರಿಕೆ, ಇಟ್ಟಿಗೆ ತಯಾರಿಕೆ, ಕುಂಬಾರಿಕೆ, ಗಾರಿಕೆಲಸ, ಬೀದಿಮಕ್ಕಳು, ಮನೆಕೆಲಸ, ಬೀಡಿ, ಆಗರಬತ್ತಿ, ವೀಳ್ಯೆಯದ ಎಲೆ ಕೊಯ್ಯುವುದು, ಮಾಂಸದ ಅಂಗಡಿ, ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಮಕ್ಕಳು ಕೆಲಸ ಮಾಡುತ್ತಿದ್ದಾರೆ.

ಇಂತಹ ಮಕ್ಕಳನ್ನು ದುಡಿಸಿಕೊಳ್ಳುವುದರಿಂದ, ಕಡಿಮೆ ಕೂಲಿ, ಹೆಚ್ಚು ಕೆಲಸ, ಹೆಚ್ಚು ಲಾಭ, ಪ್ರಾಮಾಣಿಕ ಕೆಲಸ, ಹೆಚ್ಚು ಸಮಯ ಕೆಲಸ, ನಿರಂತರ ಕೆಲಸ, ವೇಗದ ಕೆಲಸ, ಹಾಗೂ ಮಕ್ಕಳು ಪ್ರಶ್ನಿಸುವುದಿಲ್ಲ, ಅವರಿಗೆ ಬೋನಸ್ ಇಲ್ಲ, ಸಂಘಟನೆ ಇಲ್ಲ, ಹೇಳಿದಂತೆ ಕೇಳುತ್ತಾರೆ.

- ಬಾಲಕಾರ್ಮಿಕತೆ ಮಕ್ಕಳ ಹಕ್ಕುಗಳ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಕ್ರಿಯೆಯಾಗಿದೆ.
- ಬಾಲಕಾರ್ಮಿಕತೆ ಅಂತರಾಷ್ಟ್ರೀಯ ಕಾರ್ಮಿಕ ಮಾನಗಳ ಉಲ್ಲಂಘನೆಯಾಗಿದ್ದು, ಇದು ವ್ಯಾಪಾರ ಮತ್ತು ಸಾಮಾಜಿಕ ಬಹಿಷ್ಕಾರಗಳಿಗೆ ಎಡೆ ಮಾಡಿಕೊಡಬಹುದು.
- ಮಕ್ಕಳು ಬಾಲಕಾರ್ಮಿಕರಾಗುವುದರಿಂದ ಅವರು ಶಿಕ್ಷಣದಿಂದ ವಂಚಿತರಾಗುವುದರಿಂದ ಅವರು ಆನಕ್ಷರಸ್ಥರಾಗುವರು, ಅವರು ಆನಕ್ಷರಸ್ಥರಾಗುವುದರಿಂದ ಜೀವನವಿಡೀ ಇನ್ನೊಬ್ಬರ ಮೇಲೆ ಅವಲಂಬಿತರಾಗಬೇಕಾಗಬಹುದು. ಅನಕ್ಷರತೆ ಅವರ ಅಭಿವೃದ್ಧಿಗೆ ಅಡ್ಡಿ ಬರುವುದು.
- ಶಿಕ್ಷಣ ಇಲ್ಲದೆ ಇರುವುದರಿಂದ ಅವರ ಅಭಿವೃದ್ಧಿ ಕುಂಠಿತವಾಗುವುದರಿಂದ ಅವರು ಬಡತನದಲ್ಲಿ ಜೀವನ ನಡೆಸಬೇಕಾಗುವುದು. ಶಿಕ್ಷಣದಿಂದ ಉತ್ತಮ ಸಂಪಾದನೆ ಮಾಡಲು ಸಾಧ್ಯವಾಗುವುದು.
- ಬಾಲಕಾರ್ಮಿಕರು ಹಲವಾರು ಕಾಯಿಲೆಗಳಿಗೆ ತುತ್ತಾಗುವ ಸಂಭವವಿರುವುದು. ಹೆಚ್ಚಿನವರು ಅನಾರೋಗ್ಯಕರವಾದ ವಾತಾವರಣದಲ್ಲಿ ಕೆಲಸ ಮಾಡುವುದರಿಂದ ಕಾಯಿಲೆಗಳಿಗೆ ತುತ್ತಾಗುವುದು.
- ಬಾಲಕಾರ್ಮಿಕತೆಯಿಂದ ಮಕ್ಕಳ ಬೆಳವಣಿಗೆ ಕುಂಠಿತವಾಗುವುದು. ಅವರ ದೇಹ ಬೇಗನೆ ಮುಪ್ಪಾಗುವುದು.
- ಬಾಲಕಾರ್ಮಿಕರು ಅಸುರಕ್ಷಿತ ವಾತಾವರಣದಲ್ಲಿ ಕೆಲಸಮಾಡಬೇಕಾದುದರಿಂದ, ಅವರು ಅವಘಡಗಳಿಗೆ ಸಿಕ್ಕಿ ತಮ್ಮ ಅಂಗಾಂಗಗಳನ್ನು ಊನಗೊಳಿಸಿಕೊಳ್ಳುವ ಸಂಭವ ಹೆಚ್ಚಾಗುತ್ತದೆ.
- ಬಾಲಕಾರ್ಮಿಕರು ದೊಡ್ಡವರ ಹಾಗೆ ಜಾಗರೂಕರಾಗಿರುವುದಿಲ್ಲ. ಇದರಿಂದ ಅವರು ಅಪಾಯಕಾರಿ ವಾತಾವರಣದಲ್ಲಿ ಕೆಲಸ ಮಾಡುವಾಗ ಜೀವ ಕಳೆದು ಕೊಳ್ಳುವ ಸಂಭವ ಇರುವುದು.
- ಬಾಲಕಾರ್ಮಿಕರು ಮನೆಯಿಂದ ಹೊರಗೆ ಬೇರಯವರ ಜೊತೆಯಲ್ಲಿ ದುರಾಭ್ಯಾಸಗಳಿಗೆ ದಾಸರಾಗುವ ಸಂಭವ ಇರುತ್ತದೆ.
- ಬಾಲಕಾರ್ಮಿಕರು ಅಪರಾಧಿಗಳ ಸಂಪರ್ಕಕ್ಕೆ ಬಂದು ಅಪರಾಧಿಗಳಾಗುವ ಸಂಭವ ಹೆಚ್ಚಿರುವುದು. ಅವರು ಸಮಾಜ ದ್ರೋಹಿಗಳಾಗುವ ಸಂಭವ ಇರುವುದು.
- ಬಾಲಕಾರ್ಮಿಕತೆ ದೇಶದಲ್ಲಿ ದೊಡ್ಡವರಿಗೆ ಉದ್ಯೋಗದ ಕೊರತೆಯನ್ನು ಹುಟ್ಟುಹಾಕುತ್ತದೆ.
- ಬಾಲಕಾರ್ಮಿಕತೆ ಮಕ್ಕಳನ್ನು ಕೌಶಲ್ಯ ರಹಿತ ವ್ಯಕ್ತಿಗಳನ್ನಾಗಿ ರೂಪಿಸುವುದು.

ಬಾಲ ಕಾರ್ಮಿಕತೆಗೆ ಕಾರಣಗಳೇನು? ಬಡತನ, ಅನಕ್ಷರತೆ, ನಿರುದ್ಯೋಗ, ಜನಸಂಖ್ಯೆ ಸ್ಫೋಟ ಆದರೆ ಇವುಗಳು ಯಾವುದೂ ನೇರವಾಗಿ ಬಾಲಕಾರ್ಮಿಕತೆ ಕಾರಣವಾಗಿಲ್ಲ. ಬದಲಾಗಿ ಬಾಲಕಾರ್ಮಿಕತೆ ಈ ಎಲ್ಲಾ ಸಮಸ್ಯೆಗಳಿಗೆ ಕಾರಣವಾಗುತ್ತದೆ ಎಂಬುವುದು ನಮಗೆ ತಿಳಿದಿರಲಿ. ಮಕ್ಕಳು ದುಡಿಯುವದರಿಂದ ಬಡತನ ಕಡಿಮೆಯಾಗಿಲ್ಲ. ನಿರುದ್ಯೋಗ ಉಳಿದುಕೊಂಡಿದೆ. ಮಕ್ಕಳು ದುಡಿಯುವುದರಿಂದ ಶಿಕ್ಷಣ ಜ್ಞಾನವಿಲ್ಲದೆ ಜನಸಂಖ್ಯೆ ಹೆಚ್ಚಿದ್ದು ಆನಕ್ಷರತೆ ಜಾಸ್ತಿಯಾಗುತ್ತದೆ. ಮಕ್ಕಳು ದುಡಿಯುವದರಿಂದ ಯಾವ ಕುಟುಂಬವೂ ಉದ್ದಾರವಾಗಿಲ್ಲ ಬದಲಾಗಿ ಮತ್ತೇ ಬಡತನ ಹೆಚ್ಚಿದೆ.

***ಶಿವಾನಂದ ೭ನೆ ತರಗತಿ, ಸ.ಹಿ.ಪ್ರಾ.ಶಾಲೆ, ಮುದ್ದನಗುಡಿ***

***ಅತಿಯಾದ ಆಹಾರ ರೋಗವನ್ನು ಓಡಿಸುತ್ತದೆ– ಸ್ಕಾಟ್ ಲ್ಯಾಂಡ್ ಗಾದೆ***



# ಎಸ್.ಡಿ.ಎಂ.ಸಿ. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆಯೇ ಎಂಬುವುದಕ್ಕಾಗಿ ಪರಿಶೀಲನಾ ಪಟ್ಟಿ





- ಎಸ್.ಡಿ.ಎಂ.ಸಿ.ಯಲ್ಲಿ ಪೋಷಕ ಸಭೆಯಿಂದ ಆಯ್ಕೆ ಮಾಡಿದ ಒಂಭತ್ತು ಮಂದಿ ಪೋಷಕ ಪ್ರತಿನಿಧಿಗಳು ಇರತ್ತಾರೆಯೇ?
- ಸರಕಾರಿ ಆದೇಶದಂತೆ ಈ ಸಮಿತಿಯು ನಿರಂತರವಾಗಿ ತಿಂಗಳಿಗೆ ಒಂದರಂತೆ ಸಭೆ ನಡೆಸಲಾಗುತ್ತದೆಯೇ?
- ಎಸ್.ಡಿ.ಎಂ.ಸಿ. ಮಾಸಿಕ ಸಭೆಯು ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಅನುಕೂಲವಾದ ಸ್ಥಳದಲ್ಲಿ ನಡೆಯುತ್ತದೆಯೇ?
- ಶಾಲೆಯ ಅಭಿವೃದ್ಧಿಯ ಬಗ್ಗೆ ಎಸ್.ಡಿ.ಎಂ.ಸಿ. ಸಭೆಗಳಲ್ಲಿ ಕೂಲಂಕಷ ಚರ್ಚೆ ನಡೆಸಲ್ಪಡುತ್ತದೆಯೇ?
- ಶಾಲೆಗೆ ಬರುವ ಇಲಾಖೆಗಳ ಎಲ್ಲಾ ಸುತ್ತೋಲೆಗಳು ಎಸ್.ಡಿ.ಎಂ.ಸಿ. ಅಧ್ಯಕ್ಷರ ಗಮನಕ್ಕೆ ತರಲಾಗುತ್ತದೆಯೇ?
- ಎಸ್.ಡಿ.ಎಂ.ಸಿ. ಸಭೆಯ ನಿರ್ಣಯದ ಮುಖೇನ ಖರ್ಚು ವೆಚ್ಚಗಳಿಗೆ ಜಂಟಿ ಬ್ಯಾಂಕ್ ಖಾತೆಯಿಂದ ಹಣವನ್ನು ತೆಗೆದುಕೊಳ್ಳಲಾಗುತ್ತದೆಯೇ?.
- ಚೆಕ್ ಪುಸ್ತಕದಲ್ಲಿ ದಾಖಲಿಸಿದ ನಿಗದಿತ ಮೊತ್ತ ಪರಿಶೀಲಿಸಿದ ನಂತರ ಅಧ್ಯಕ್ಷರು/ಕಾರ್ಯದರ್ಶಿ ಸಹಿ ಹಾಕುತ್ತಾರೆಯೇ?
- ಹಣಕಾಸಿನ ಖರ್ಚಿನ ಎಲ್ಲ ವಿವರಗಳನ್ನು ಎಸ್.ಡಿ.ಎಂ.ಸಿ.ಯು ಕೂಲಂಕುಷವಾಗಿ ಗಮನಿಸಲಾಗುತ್ತಿದೆಯೇ?
- ಎಸ್.ಡಿ.ಎಂ.ಸಿ.ಯ ಹಕ್ಕು ಮತ್ತು ಕರ್ತವ್ಯದ ಬಗ್ಗೆ ಎಲ್ಲಾ ಪೋಷಕ ಸದಸ್ಯರಿಗೆ ಮಾಹಿತಿ ಇದೆಯೇ?
- ಶಾಲಾ ತರಗತಿ ಕೊಠಡಿಗಳಲ್ಲಿನ ಪಾಠ ಪ್ರವಚನ ಹಾಗೂ ಇನ್ನಿತರ ಶೈಕ್ಷಣಿಕ ಚಟುವಟಿಕೆಗಳಲ್ಲಿ ಎಸ್.ಡಿ.ಎಂ.ಸಿ. ಸದಸ್ಯರು ಸಹಕರಿಸುತ್ತಾರೆಯೇ?
- ಶಾಲಾ ಪರಿಸರದಲ್ಲಿ ಬಾಲಕಾರ್ಮಿಕರಿದ್ದರೆ ಸ್ಥಳೀಯ ಬಾಲಕಾರ್ಮಿಕ ಪದ್ಧತಿ ನಿರ್ಮೂಲನ ಸಮಿತಿಗೆ ಎಸ್.ಡಿ.ಎಂ.ಸಿ. ಸದಸ್ಯರು ಹಾಗೂ ಶಿಕ್ಷಕ ವೃಂದದವರು ಮಾಹಿತಿ ನೀಡುತ್ತಿದ್ದಾರೆಯೇ?
- ಮಕ್ಕಳ ಹಕ್ಕುಗಳ ಕ್ಲಬ್‌ನ ಮೂಲಕ ಮಕ್ಕಳ ಹಕ್ಕುಗಳ ಉಲ್ಲಂಘನೆಯಾದಾಗ ಎಸ್.ಡಿ.ಎಂ.ಸಿ. ಸೂಕ್ತ ಸ್ಪಂದನೆ ನೀಡುತ್ತದೆಯೇ?
- ಶಿಕ್ಷೆ ಇಲ್ಲದೆ ಪಾಠ ಕಲಿಸುವುದನ್ನು ಎಸ್.ಡಿ.ಎಂ.ಸಿ. ಬೆಂಬಲಿಸುತ್ತಿದೆಯೇ?
- ಎಲ್ಲಾ ಶಾಲಾ ಶೈಕ್ಷಣಿಕ ಹಾಗೂ ಇತರ ಚಟುವಟಿಕೆಗಳನ್ನು ಎಸ್.ಡಿ.ಎಂ.ಸಿ.ಯೇ ಸಂಯೋಜಿಸುತ್ತಿದೆಯೇ?
- ಎಸ್.ಡಿ.ಎಂ.ಸಿ. ಯಲ್ಲಿ ಆಯ್ಕೆ ಮಾಡಿದ ಪೋಷಕ ಸದಸ್ಯರಲ್ಲಿ ಸರಕಾರ ನಿಗದಿಪಡಿಸಿದ ಪರಿಶಿಷ್ಟ ಜಾತಿ/ ಪಂಗಡದ ಪ್ರತಿನಿಧಿಗಳು ಇದ್ದಾರೆಯೇ?
- ಎಸ್.ಡಿ.ಎಂ.ಸಿ.ಯಲ್ಲಿ ಆಯ್ಕೆ ಮಾಡಿದ ಪೋಷಕ ಸದಸ್ಯರಲ್ಲಿ ಸರಕಾರ ನಿಗದಿಪಡಿಸಿದ ಅಲ್ಪಸಂಖ್ಯಾತ ಪ್ರತಿನಿಧಿಗಳು ಇದ್ದಾರೆಯೇ?
- ಯಾವುದೇ ಸಂಘ–ಸಂಸ್ಥೆಗಳು ಶಾಲಾ ಆವರಣದಲ್ಲಿ ಚಟುವಟಿಕೆಗಳನ್ನು ಆಯೋಜಿಸುವಾಗ ಸರಕಾರದ ನಿಯಮಗಳಿಗನುಸಾರವಾಗಿ ಮಾಡಲಾಗುತ್ತದೆಯೇ?
- ಜನಪ್ರತಿನಿಧಿಗಳೊಂದಿಗೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಳ್ಳಲಾಗುತ್ತಿದೆಯೇ?
- ಶಾಲೆಯ ಎಲ್ಲಾ ಅಭಿವೃದ್ಧಿ ಕಾಮಗಾರಿಯನ್ನು ಎಸ್.ಡಿ.ಎಂ.ಸಿ.ಯು ಉಸ್ತುವಾರಿ ಮಾಡುತ್ತಿದೆಯೇ?
- ಶಾಲೆ ವ್ಯಾಪ್ತಿಯಲ್ಲಿ ಹೊರಗುಳಿದ ಮಕ್ಕಳನ್ನು ಶಾಲೆಗೆ ಕರೆತರಲು ಕಾಳಜಿ ವಹಿಸುತ್ತಿದ್ದೀರಾ?



ಈ ಮೂರು ಮಾತುಗಳಿಂದ ದೂರವಿರು
ಜಂಭ, ಸುಳ್ಳು, ಅಹಂಕಾರ
ಈ ಮೂರು ವ್ಯಕ್ತಿಗಳ ಮಾತನ್ನು ಪಾಲಿಸು
ಗುರು, ರಾಜ, ವೈದ್ಯ.
ಈ ಮೂರುನ್ನು ಬಿಟ್ಟು ಬಿಡು
ಅಧಿಕ ಮಾತು, ಅಸಡ್ಯ , ವಂಚನೆ.
ಈ ಮೂರನ್ನು ಪ್ರೇಮಿಸು
ಪರಾಕ್ರಮ, ಪ್ರೇಮ, ಪ್ರಾಮಾಣಿಕತನ
ಈ ಮೂರನ್ನು ತ್ಯಾಗಮಾಡು
ಸ್ವಾರ್ಥ, ದ್ವೇಷ, ನೀಚತನ
ಈ ಮೂರಲ್ಲಿ ವಿಶ್ವಾಸವಿಡು
ಪರಮಾತ್ಮ, ದೇಹ ಸಂಪತ್ತು, ಸತ್ಯ
ಈ ಮೂರನ್ನು ವಶದಲ್ಲಿಟ್ಟುಕೋ
ಕ್ರೋಧ, ಮನಸ್ಸು, ನಾಲಿಗೆ
ಈ ಮೂರಕ್ಕೆ ಸಿದ್ಧವಾಗಿರು
ದು:ಖ, ಸಮಯ, ಮೃತ್ಯು.
ಈ ಮೂವರಿಗೆ ಸಹಾಯ ಮಾಡು
ರೋಗಿ, ಬಡವ, ನಿರಾಶ್ರಿತ.

ಪಾರ್ವತಿ ೭ನೇ ತರಗತಿ
ಸ.ಹಿ.ಪ್ರಾ. ಶಾಲೆ ದೇವಿಪುರ

*ಅತಿ ಕಡಿಮೆ ಅತಿ ಹೆಚ್ಚು ತಿಂದರೂ ಹೆಚ್ಚು ನೀರು ಕುಡಿಯಿರಿ– ಸ್ಟೇನ್ ಗಾದೆ*





# ವಿಮುಕ್ತಿಯ ನೆರಳು

ದಾಸರ ಸಂತರ ಮನಸಿನ ಉಕ್ತಿ, ದೇವರ ಕಾಣುವ ಮಾರ್ಗವೇ ಭಕ್ತಿ, ಸಾಧನೆಗೆ ಬೇಕು ಕೇಂದ್ರಿತ ಶಕ್ತಿ, ದೊರಕಲಿ ಪ್ರಭುವೇ ಲೌಕಿಕ ಮುಕ್ತಿ—ವಿಮುಕ್ತಿ ಯಾವುದೇ ಒಂದು ಪ್ರದೇಶದ ಅಥವಾ ನಿರ್ಧಿಷ್ಟ ಭೌಗೋಲಿಕ ವ್ಯಾಪ್ತಿಯ ಅಭಿವೃದ್ಧಿಯಲ್ಲಿ ಹಲವಾರು ಸಂಘ ಸಂಸ್ಥೆಗಳು ಸ್ವ ಇಚ್ಛೆಯಿಂದ, ಪ್ರತ್ಯೇಕವಾಗಿ, ಪರೋಕ್ಷವಾಗಿ ಶ್ರಮಿಸುತ್ತಿರುವುದನ್ನು ನಾವು ಕಾಣಬಹುದು. “ಒಗ್ಗಟ್ಟಿನಲ್ಲಿ ಬಲವಿದೆ” ಎಂಬ ಗಾದೆ ಮಾತಿನಂತೆ, ಎಲ್ಲರ ಶಕ್ತಿಯನ್ನು ಸಂಘದ ಮೂಲಕ ಒಗ್ಗೂಡಿಸಿ ಹೋರಾಡಿದಾಗ, ಪ್ರಯತ್ನಿಸಿದಾಗ, ನಿರೀಕ್ಷಿತಫಲ ನಮ್ಮದಾಗುತ್ತದೆ. ಆದರೂ ಕೆಲವೊಂದು ಸಂಘ ಸಂಸ್ಥೆಗಳು ನಾಡಿನ, ನಾಡಿನ ಜನತೆಯ ಹಿತಕ್ಕಿಂತ, ತಮ್ಮ ಸ್ವ ಹಿತಾಸಕ್ತಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ, ತಮ್ಮ ಧ್ಯೇಯ ಧೋರಣೆಗಳನ್ನು ಗಾಳಿಗೆ ತೂರಿ ಮನಬಂದಂತೆ ವರ್ತಿಸುತ್ತಿರುವುದನ್ನು ನಮ್ಮ ಕಣ್ಣ ಮುಂದೆಯೇ ನೋಡುತ್ತಿರುತ್ತೇವೆ.

ಭೂಮಿಗೆ ಬಿದ್ದ ಎಲ್ಲಾ, ಸ್ವಾತಿ ಮಳೆ ಹನಿಯು ಮುತ್ತಾಗುವುದಿಲ್ಲ. ಆದರೂ ಕೆಲವೊಂದು ಹನಿಗಳು ಮುತ್ತಾಗಿ ಪರಿವರ್ತನೆಯಾಗುವಂತೆ, ಈ ಮುತ್ತಿನ ರೀತಿಯಾಗಿ ತನ್ನ ಘನತೆ, ಮೌಲ್ಯವನ್ನು ಉಳಿಸಿಕೊಂಡು ಬಂದಿರುವ ಪ್ರಮುಖ ಸಂಸ್ಥೆಯೆಂದರೆ, ವಿಮುಕ್ತಿ ಚಾರಿಟೇಬಲ್ ಟ್ರಸ್ಟ್. ರಾಯಚೂರಿನ ಪೋತ್ನಾಳ ನಂತಹ ಹಿಂದುಳಿದ ಪ್ರದೇಶದಲ್ಲಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಸ್ಥಾಪಿತಗೊಂಡ ಈ ಸಂಸ್ಥೆಯ ಕಾರ್ಯ ವೈಖರಿ ನಿಜಕ್ಕೂ ಶ್ಲಾಘನೀಯ. ವಿಮುಕ್ತಿಯೊಂದಿಗೆ ಒಡನಾಟವನ್ನು ಇಟ್ಟು ಕೊಂಡಿರುವ ನನಗೆ, ಇವರ ಪ್ರತಿಫಲಾಪೇಕ್ಷೆ ಇಲ್ಲದ ಸಾರ್ವಜನಿಕ ಹಿತಾಸಕ್ತಿಯ ಕೆಲಸ ಕಾರ್ಯಗಳು ಸಂತೋಷದ ಜೊತೆಯಲ್ಲಿ ಆಶ್ಚರ್ಯವನ್ನುಂಟು ಮಾಡಿರುವುದರಲ್ಲಿ ಸಂದೇಹವಿಲ್ಲ.

ಮಕ್ಕಳು ದೇವರ ತೋಟದ ಹೂಗಳು, ಎಂದೆಂದೂ ಮುದುಡದ ಕುಸುಮಗಳು, ಆದರೆ ಈ ಹೂಗಳಿಗೆ ಸರಿಯಾದ ಪೋಷಣೆ ಅಗತ್ಯವಿದೆ. ಈ ಅಂಶವನ್ನನುಸರಿಸಿ ಪೋತ್ನಾಳ ವಲಯದಲ್ಲಿನ ಶಾಲೆಯೆಂಬ ಉದ್ಯಾನವನದಲ್ಲಿನ ಹೂಗಳಿಗೆ ಜ್ಞಾನಧಾರೆಯ ಕೆಲಸ ಮಾಡಿಕೊಂಡು ಬರುತ್ತಿರುವ ವಿಮುಕ್ತಿಯ ಪ್ರಯತ್ನ ನಿಜಕ್ಕೂ ಪುರಸ್ಕರಿಸುವಂತದ್ದು.

ವಿಮುಕ್ತಿ ಸಂಘದ ಕಡೆಯಿಂದ ನಡೆಯುತ್ತಿರುವ ಮಕ್ಕಳಿಗೆ ಪ್ರೋತ್ಸಾಹಕವಾದ ವಿಧ್ಯಾರ್ಥಿವೇತನ, ಪುಸ್ತಕ ವಿತರಣೆ, ಮಕ್ಕಳ ಪ್ರತಿಭೆ ಅನಾವರಣಗೊಳಿಸುವ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು, ಕ್ರೀಡಾ ಸ್ಪರ್ಧೆಗಳು, ಮಕ್ಕಳಲ್ಲಿ ನಾಯಕತ್ವ, ಮಾತುಗಾರಿಕೆ, ಸಮೂಹ ಜೀವನ ಮುಂತಾದ ಗುಣಗಳನ್ನು ಬೆಳೆಸುವ ವಿಮುಕ್ತಿ ಮಕ್ಕಳ ಸಂಘ ಮುತಾದವುಗಳು ಮಕ್ಕಳ ವ್ಯಕ್ತಿತ್ವ ವಿಕಸನದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಅಲ್ಲದೆ ಶಾಲೆಗಳಿಗೆ ನೀಡಿರುವ ಕುಡಿಯುವ ನೀರಿನ ಸೌಲಭ್ಯ, ಪೀಠೋಪಕರಣಗಳು, ಗ್ರಂಥಾಲಯದ ಪುಸ್ತಕಗಳು, ಮೈದಾನಕ್ಕೆ ಗಿಡಗಳು, ನಿಜವಾಗಿಯೂ ಶೈಕ್ಷಣಿಕ ಅಭಿವೃದ್ಧಿಯತ್ತ ಇಡುತ್ತಿರುವ ದಿಟ್ಟ ಹೆಜ್ಜೆ ಗುರುತುಗಳಾಗಿವೆ.

ಒಬ್ಬ ಶಿಕ್ಷಕನಾಗಿ ನಾನು ಮೂರು ವರ್ಷದ ಅವಧಿಯಲ್ಲಿ ವಿಮುಕ್ತಿಯು ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಮಾಡಿದ ಪ್ರಗತಿಯನ್ನು ಮನದಾಳದಲ್ಲಿ ಸ್ಮರಿಸಿದ್ದೇವೆ. ನೆರೆಹಾವಳಿಯ ಸಂದರ್ಭದಲ್ಲಿ ಸ್ವ–ಇಚ್ಛೆಯಿಂದ ಹಾನಿಗೊಳಗಾದ ಮನೆಗಳ ಸಮೀಕ್ಷೆ ಮಾಡಿ ಹಣಕಾಸಿನ ನೆರವನ್ನು ನೀಡಿ ವಿಮುಕ್ತಿಯ ಚಿಹ್ನೆ ನೊಂದವರ ಮನದಲ್ಲಿ ಅಚ್ಚಳಿಯದಂತೆ ಉಳಿದಿದೆ.

ಯಾವುದೇ ಕಡೆಯಿಂದ ನೋಡಿದರೂ ಹಿಂದುಳಿದ ಪ್ರದೇಶವಾದ ಪೋತ್ನಾಳ ವಲಯದಲ್ಲಿ ಸಾಮಾಜಿಕ ಅಭಿವೃದ್ಧಿಯ ಕೆಲಸ ಕಾರ್ಯಗಳು ನಿರಂತರವಾಗಿ ಸಾಗುತ್ತಿರುವುದನ್ನು ಕಾಣಬಹುದು. ಬಾಲಕಾರ್ಮಿಕ ಪದ್ಧತಿ, ಮೂಢನಂಬಿಕೆ, ಬಾಲ್ಯವಿವಾಹ, ದೇವದಾಸಿ ಪದ್ಧತಿ, ಅನಕ್ಷರತೆ ಮುಂತಾದವುಗಳಿಂದ ನಲುಗುತ್ತಿರುವ ಈ ಪ್ರದೇಶದಲ್ಲಿ ವಿವಿಧ ಚಟುವಟಿಕೆಗಳ ಮೂಲಕ ಜನರಲ್ಲಿ ಅರಿವು ಮೂಡಿಸುವ ಪ್ರಯತ್ನ ವಿಮುಕ್ತಿ ಟ್ರಸ್ಟ್ ವತಿಯಿಂದ ನಿರಂತರವಾಗಿ ಸಾಗುತ್ತದೆ.

ತನ್ನ ಕಾರ್ಯಕ್ಕೆ ಅನ್ವರ್ಥ ಎಂಬಂತೆ ‘ವಿಮುಕ್ತಿ’ ಎಂಬ ಹೆಸರನ್ನಿಟ್ಟುಕೊಂಡಿರುವ ಈ ಸಂಸ್ಥೆಯು ತನ್ನ ಹೆಸರಿಗೆ ಪೂರಕವಾದ ಕಾಯಕವನ್ನು ನಡೆಸಿಕೊಂಡು ಬರುತ್ತಿದೆ. ವಿಮುಕ್ತಿ ಎಂದರೆ, ಜೀವನ್ಮರಣದಿಂದ ಮುಕ್ತಿಯನ್ನು ಹೊಂದುವುದು, ಕಷ್ಟಕೋಟಲೆಗಳಿಂದ ಬಿಡುಗಡೆ ಹೊಂದುವುದು ಎಂಬ ಅರ್ಥ ಹೊಂದಿದ್ದು, ಪರರನ್ನು ಮುಕ್ತಿಯತ್ತ ಸಾಗಿಸಲು ಪ್ರಯತ್ನಿಸುತ್ತಿರುವುದು ಪ್ರತಿಶತ ಮೆಚ್ಚುವಂತದ್ದು, ಅನ್ಯರ ದು:ಖಕ್ಕೆ ಸ್ಪಂದಿಸಿ ಸಂಸ್ಥೆಯು ಯಶಸ್ವಿಗಾಗಿ ಶ್ರಮಿಸುತ್ತಿರುವ ಕಾರಣಕರ್ತರಿಗೂ ನನ್ನ ಮನದಾಳದ ವಂದನೆಗಳನ್ನು ಸಲ್ಲಿಸುತ್ತಾ, ವಿಮುಕ್ತಿಯ ಕೀರ್ತಿ ಉತ್ತುಂಗಕ್ಕೇರಿ, ಪವನ ಶಕ್ತಿಯಂತೆ ಅಭಿವೃದ್ಧಿ ಕೆಲಸಗಳು ಸಾಗಲೆಂದು ಹಾರೈಸುತ್ತೇನೆ.

**ಶ್ರೀಕಾಂತ್ ಮೊಗವೀರ ಶಿಕ್ಷಕರು**
**ಸ.ಹಿ.ಪ್ರಾ.ಶಾಲೆ ಮರಕಂದಿನ್ನಿ**

## ಜೀವನ

**ಜೀವನ ಒಂದು ಪಯಣ,**
**ಅದರ ಅಂತ್ಯ ಮರಣ,**
**ಮಧ್ಯದಲ್ಲಿ ಸುಖ ದು:ಖಗಳ ಮಿಲನ,**
**ಇದೇ ನಮ್ಮ ಜೀವನ.**
**ಮಾತುಗಳು**

**ಸಂಗ್ರಹ : ಲಕ್ಷ್ಮೀ 9ನೇ ತರಗತಿ**
**ಸ.ಹಿ.ಪ್ರಾ ಶಾಲೆ ನಲಗಂದಿನ್ನಿ**



***ಮಿತವಾಗಿ ಆಹಾರ ಸೇವಿಸುವುದೇ ಮೊದಲ ಜಾಗ್ರತೆ– ಇಟಲಿಗಾದೆ***




# ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ




ಪ್ರಾಚೀನ ಭಾರತದಲ್ಲಿ ಸ್ತ್ರೀಯರು ಪುರುಷರಿಗಿದ್ದಷ್ಟೆ ಹಕ್ಕು ಬಾಧ್ಯತೆಗಳನ್ನು ಪಡೆದಿದ್ದರು. ಕಾಲಕ್ರಮೇಣ ಸಾಮಾನ್ಯವಾಗಿ ಲೌಕಿಕ ರಂಗಗಳಲ್ಲಿ ಪುರುಷರೆ ಪ್ರಧಾನರಾದರು. ಅಕ್ಷರಶಃ ಸ್ತ್ರೀ ಗೃಹಿಣಿಯಾಗಿ ಮನೆಗೆಲಸ ಮತ್ತು ಮಕ್ಕಳ ಲಾಲನೆ ಪೋಷಣೆ ಮಾಡುವದು ಅವಳ ಜೀವನಕ್ರಮವಾಯಿತು. ಪುರುಷ ಪ್ರಧಾನ ಸಮಾಜದಲ್ಲಿ ಪುರುಷರಂತೆ ವಿವಿಧ ರಂಗಗಳಲ್ಲಿ ಕೆಲಸಮಾಡುವ ಶಕ್ತಿ ಅವಳಿಗಿದ್ದರೂ ಅವಕಾಶಗಳು ಮಾತ್ರ ಕಡಿಮೆ ಆಯಿತು. ಆಸ್ತಿ ಹಕ್ಕು ಕಾಯಿದೆಯಿದ್ದರು ಜಾರಿಯಲ್ಲಿ ಇಲ್ಲವಾಯಿತು. ಈಗ ಸಧ್ಯದ ಪರಿಸ್ಥಿತಿಯಲ್ಲಿ ಜಾರಿಗೆ ತಂದಿದೆ. ಅದು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬರುವದು ಕಾದುನೋಡವ ಸಂಗತಿ. ಆದರೆ ಈ ಹಲವು ಕಾರಣಗಳಿಂದ ಸ್ತ್ರೀಯರ ಸ್ಥಾನಮಾನ ಕುಗ್ಗಿದೆ. ಸ್ತ್ರೀ ಪುರುಷರ ಸಮಾನಳಲ್ಲವೆಂದು ಅಂದಿನ ಕೆಲವು ಸ್ವಾರ್ಥಿಗಳು ಅವಳನ್ನು ದುರ್ಬಲ ಗುಂಪಿಗೆ ಸೇರಿಸಿದ್ದರು. ಮುಕ್ತಿ ಪಡೆಯಲು ಧಾರ್ಮಿಕ ವಿಧಿ ವಿದಾನಗಳಲ್ಲಿ ಪಾಲ್ಗೊಳ್ಳಲು ಆರ್ಹಳಲ್ಲವೆಂದು ಅವಳನ್ನು ದೂರ ಸರಿಸಲಾಯಿತು. ದೇವದಾಸಿಯಂತ ಅನಿಷ್ಟ ಪದ್ಧತಿಯಿಂದ ಸ್ತ್ರೀ ಅಂದು ಭೋಗದ ವಸ್ತು ಹೀಗಾಗಿ ಅಸ್ಪೃಶ್ಯಳನ್ನಾಗಿರಿಸಿದರು. ಪುರುಷನ ಸುಖಕ್ಕಾಗಿಯೇ ಇರುವಂಥವಳು, ಮಹಿಳೆ ಮಕ್ಕಳನ್ನು ಹೆರುವ ಯಂತ್ರ ಎಂಬ ಭಾವನೆ ಹೆಚ್ಚು ಕಡಿಮೆ ಜನರಲ್ಲಿ ಬೇರೂರಿತ್ತು.

ಆಧ್ಯಾತ್ಮ ಪ್ರಧಾನವಾದ ಈ ಭಾರತ ಮಹಿಳೆಯನ್ನು ಅತ್ಯುನ್ನತ ಸ್ಥಾನಮಾನ ನೀಡಿ ಗೌರವಿಸುತ್ತಾ ಬಂದಿದೆ. ಪ್ರಸ್ತುತ ಸಮಾಜದಲ್ಲಿ ಇಂದು ಮಹಿಳೆ ಮಾಡುತ್ತಿರುವ ಸಾಧನೆಯನ್ನು ಗಮನಿಸಿದಾಗ ಆಕೆಯ ನೂತನ ದಾಖಲೆಗಳು ಉದಾಹರಣೆಯಾಗಿ ತೆಗೆದು ಕೊಂಡಾಗ ಮೊದಲ ಮಹಿಳಾ ಪ್ರಧಾನಿಯಾದ ಶ್ರೀಮತಿ ಇಂದಿರಾ ಗಾಂಧಿ, ರಾಷ್ಟ್ರ ಪತಿ ಪ್ರತಿಭಾ ಪಾಟೀಲ್, ಪಿ.ಟಿ.ಉಷಾ, ಅಶ್ವಿನಿ ನಾಚಪ್ಪ, ಕಲ್ಪನಾ ಚಾವ್ಲಾ, ಸುನಿತಾ ವಿಲಿಯಂ, ಲತಾ ಮಂಗೇಸ್ಕರ್, ಎಸ್.ಜಾನಕಿ, ಮೇಧಾ ಪಾಟ್ಕರ್ ಹೀಗೆ ಹಲವಾರು ಮಹಿಳೆಯರು ಸಮಾಜದಲ್ಲಿ ಅತ್ಯುತ್ತಮ ಸಾಧನೆಯನ್ನು ಮಾಡಿದ್ದಾರೆ. ಮಹಿಳೆ ಆಕಾಶದೆತ್ತರಕ್ಕೆ ಹಾರಿ ಸಮುದ್ರದ ಆಳವನ್ನು ಅಳೆಯುಬಲ್ಲಳು. ಹಾಗೆಯೇ ಅಧ್ಯಾತ್ಮದಲ್ಲಿಯೂ ಮಹಾಶಕ್ತಿಯಾಗಿ ಹೊರಹೊಮ್ಮಿದ್ದಾಳೆ. 12 ನೆಯ ಶತಮಾನದ ಶಿವಶರಣೆಯರ ಸಾಧನೆ 19ನೆಯ ಶತಮಾನದ ಬ್ರಹ್ಮಕುಮಾರಿಯವರ ಸಾಧನೆಗಳನ್ನು ಗಮನಿಸಿದಾಗ ನಮಗೆ ಅರಿವಾಗುತ್ತದೆ. ಸ್ತ್ರೀ ಯಾವ ಮಟ್ಟಕ್ಕೇರಿದ್ದಾಳೆ ಎಂಬುದು ಇಲ್ಲಿ ಸ್ತ್ರೀ ಪುರುಷ ಎಂಬ ಬೇದ ಭಾವ ತಿಳಿಯದೆ. ಅನ್ಯರಿಗೆ ಕೇಡನ್ನು ಬಯಸದೇ ಎಲ್ಲರೂ ಸುಖವಾಗಿ ಸಹಬಾಳ್ವೆಯಿಂದ ಬದುಕನ್ನು ಸಾಗಿಸುವದೆ ನಿಜವಾದ ಧರ್ಮ, ಒಂದು ಮನೆತನದ ಇಡೀ ಭಾರವನ್ನು ಹೊರುವ ಮಹಿಳೆಯನ್ನು ಹೀಗೆ ಕೀಳು ಮಟ್ಟಕ್ಕೆ ದೂಡಬಾರದೆನ್ನುವುದೇ ನಮ್ಮ ಮತ್ತು ನಿಮ್ಮೆಲ್ಲರ ಆಶೆ.


**ಆರೋಗ್ಯಪ್ಪ ವಿಮಕ್ತಿ ಸಿಬ್ಬಂದಿ**





ವೆಂಕಟೇಶ ಪಿ.ಎಮ್.
೬ನೇ, ಸ.ಹಿ.ಪ್ರಾ.ಶಾಲೆ, ಮರಕಂದಿನಿ

*ಹಣ್ಣುಗಳಿಲ್ಲದ ಊಟ ಸಂಗೀತವಿಲ್ಲದ ಗೋಷ್ಠಿಯಂತೆ–ಅರಂಭ ಗಾದೆ.*





# ಮಕ್ಕಳ ಸಂಘದ ಮಹತ್ವ

## ಮಕ್ಕಳ ಸಂಘಗಳು ಎಂದರೇನು?

**ಹೊಂ**ದಾಣಿಕೆ ಹಾಗೂ ಸಮಾಜಿಕವಾಗಿ ಸಮಾನ ಮನಸ್ಸಿನ ಊರಿನ ಅಥವಾ ಶಾಲೆಯ ಮಕ್ಕಳು ಸ್ವ ಇಚ್ಚೆಯಿಂದ ಸುಮಾರು 20-25 ಮಕ್ಕಳು ಕೂಡಿ ಒಂದು ಗುಂಪುನ್ನು ಸಂಘಟಿಸಿಕೊಂಡು ತಮ್ಮದೇ ಆದ ನೀತಿ ನಿಯಮಗಳ ಚೌಕಟ್ಟಿನಲ್ಲಿ ಗುಂಪು ಚರ್ಚೆಯಲ್ಲಿ ಭಾಗವಹಿಸುವುದು. ಶಾಲೆಯ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಒಗ್ಗಟಿನಿಂದ ಇರುವುದು. ಸಮುದಾಯ ಚರ್ಚೆ, ವ್ಯಕ್ತಿತ್ವ ವಿಕಸನ ಹೊಂದುವುದಕ್ಕೆ ಕಾರ್ಯಕ್ರಮಗಳಲ್ಲಿ, ನಾಯಕತ್ವ, ಹೊಣೆಗಾರಿಕೆ, ವಿದ್ಯಾಭ್ಯಾಸದ ಕಡೆ ಆಸಕ್ತಿ ಮೂಡಿಸುವುದು. ಹಾಗೂ ಮಕ್ಕಳನ್ನು ಶಿಕ್ಷಣದಿಂದ ಮತ್ತು ಸಂಘದಿಂದ ಸರ್ವತೋಮುಖ ಅಭಿವೃದ್ದಿಯ ಕಡೆ ಕೊಂಡೊಯ್ಯಲು ಸಹಾಯಕವಾಗುತ್ತದೆ. ಇದಕ್ಕೆ ಮಕ್ಕಳ ಸಂಘದ ಮಹತ್ವ ಎಂದು ಕರೆಯುಬಹುದು.

**ಉದ್ದೇಶಗಳು:–** ಗುಂಪಿನ ಮಕ್ಕಳಿಗೆ ಧೈರ್ಯ ತುಂಬುವುದು, ಮಕ್ಕಳ ಜ್ಞಾನ ಮಟ್ಟವನ್ನು ಹೆಚ್ಚಿಸುವುದು, ಮಕ್ಕಳಲ್ಲಿ ಆಸಕ್ತಿ ತುಂಬುವುದು, ಮಕ್ಕಳು ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮಾಡುವುದು, ಮಕ್ಕಳಲ್ಲಿ ಹೊಂದಾಣಿಕೆ ಮನೋಭಾವ ತುಂಬುವುದು, ಪ್ರತಿ ತಿಂಗಳು ಸಭೆ ಮಾಡುವುದು.

**ಸಂಘದ ನಿಯಮಗಳು:–**ಸಮಾನ ಮನೋಭಾವನೆಯುಳ್ಳ 20–25 ಮಕ್ಕಳು ಸದಸ್ಯರಾಗಿರಬೇಕು. ಸಂಘ ರಚನೆಯಾದ ನಂತರ ಹೆಸರಿಡುವುದು. ಸಂಘದಲ್ಲಿ ಅಧ್ಯಕ್ಷರು ಉಪಾಧ್ಯಾಕ್ಷರು ಖಜಾಂಚಿ ಎಂದು ಆಯ್ಕೆ ಮಾಡಲಾಗುವುದು, ಹಾಗೂ ವರದಿ ಪುಸ್ತಕವನ್ನು ಬರೆಯತಕ್ಕದ್ದು

**ಕಾರ್ಯ ವೈಖರಿ:–** ಸಂಘದ ಸದಸ್ಯರುಗಳು ತಮ್ಮ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಕಂಡುಕೊಂಡು ಸಮಸ್ಯೆಗಳನ್ನು ಬಗೆಹರಿಸುವುದು. ಪ್ರತಿಯೊಬ್ಬ ಸದಸ್ಯರು ಪ್ರತಿ ತಿಂಗಳ ಸಭೆಯಲ್ಲಿ ಕಾರ್ಯಕ್ರಮ ನಿರೂಪಣೆ, ಸ್ವಾಗತ, ಧನ್ಯವಾದ ಕಾರ್ಯಕ್ರಮವನ್ನು ಕಡ್ಡಾಯವಾಗಿ ನಡೆಸಿಕೊಡತಕ್ಕದ್ದು. ಗುಂಪಿನ ಸದಸ್ಯರುಗಳಿಗೆ ಯಾವುದೊಂದು ತೊಂದರೆ ಬಂದಾಗ ಅದಕ್ಕೆ ತಕ್ಕ ಪರಿಹಾರ ಹುಡುಕಿ ಸಮಸ್ಯೆಯನ್ನು ಬಗೆಹರಿಸುವುದು. ಸಂಪನ್ಮೂಲ ವ್ಯಕ್ತಿಗಳನ್ನು ಬರಮಾಡಿಕೊಂಡು ಅನೇಕ ವಿಷಯಗಳ ಬಗ್ಗೆ ಮಾಹಿತಿ ಹಾಗೂ ತರಬೇತಿಗಳನ್ನು ಪಡೆಯುವುದು.

**ಜವಾಬ್ದಾರಿಗಳು:–** ಸಭೆಗೆ ತಪ್ಪದೆ ಹಾಜರಾಗುವುದು. ಸರದಿ ಬಂದಾಗ ಅಧ್ಯಕ್ಷರ ಸ್ಥಾನ ವಹಿಸುವುದಕ್ಕೆ ಸಿದ್ದರಿರಬೇಕು, ಸಭೆಯಲ್ಲಿ ಪ್ರತಿಯೊಬ್ಬ ಸದಸ್ಯರು ಸಮಸ್ಯೆಗಳ ಬಗ್ಗೆ ಚರ್ಚಿಸಬೇಕು. ಸಭೆಯಲ್ಲಿ ಚರ್ಚಿಸಿದ ವಿಷಯದ ವರದಿಯನ್ನು ಬರೆಯುವುದು ಮುಂದಿನ ಸಭೆಯಲ್ಲಿ ಓದುವುದು.

**ಸಂಘದ ಪ್ರತಿನಿಧಿಗಳ ಜವಾಬ್ದಾರಿಗಳು:–** ಸಭೆಯನ್ನು ತಿಂಗಳಲ್ಲಿ ೨ಬಾರಿ ತಪ್ಪದೆ ನಡೆಸಿಕೊಂಡು ಹೋಗುವುದು. ಕೊಟ್ಟ ಜವಾಬ್ದಾರಿಯನ್ನು ವಹಿಸುವುದು. ವಿವಿದ ಸಂಘಗಳನ್ನು ಬೇಟಿ ನೀಡಿ ಹಾಗೂ ಅಲ್ಲಿನ ವಿವರಗಳನ್ನು ತಮ್ಮ ಸಂಘಕ್ಕೆ ತಿಳಿಸುವುದು. ಭೇದ ಭಾವವಿಲ್ಲದೆ ಎಲ್ಲ ಸದಸ್ಯರನ್ನು ಸಮವಾಗಿ ಕಾಣುವುದು.



ಸಂಘದಲ್ಲಿ ಜಗಳ ಮತ್ತು ತೊಂದರೆಗಳು ಬಾರದಂತೆ ನೋಡಿಕೊಳ್ಳುವುದು. ಸಂಘದ ಸದಸ್ಯರನ್ನು ಪ್ರೋತ್ಸಾಯಿಸುವುದು. ಸಂಘದ ಏಳಿಗೆಗೆ ದುಡಿಯುವುದು.

**ಸದಸ್ಯರುಗಳು ಮತ್ತು ಪ್ರತಿನಿಧಿಗಳಲ್ಲಿ ಇರಬೇಕಾದ ಗುಣಗಳು:–** ಸಹಭಾಗಿತ್ವ, ಹೊಂದಾಣಿಕೆ, ಧೈರ್ಯ, ಸಾಧನೆ ಸಾಮರ್ಥ್ಯ, ಗುರಿ ಮುಟ್ಟುವ ಛಲ, ಚುರುಕುತನ, ಬುದ್ಧಿವಂತಿಕೆ, ಮುಂತಾದವುಗಳು ಮಕ್ಕಳ ಸಂಘದ ಪ್ರಮುಖ ಅಂಶಗಳಾಗಿವೆ.

**ಚಾರ್ಲಿ ವಿಮುಕ್ತಿ ಸಿಬ್ಬಂದಿ**




ವಿದ್ಯೆಯೆಂಬುದು ಶ್ರದ್ಧೆ,
ಕಲಿಯಲು ಬಿಡಬೇಕು ನಿದ್ದೆ,
ಕಲಿತರೆ ಸಿಗುವುದು ಗೌರವಾನ್ವಿತ ಹುದ್ದೆ.
ವಿದ್ಯೆಯೆಂಬುದು ಕಲೆ,
ಅದನ್ನು ಕಲಿಯಲು ಬೇಕು ತಲೆ
ಕಲಿತರೆ ಸಿಗುವುದು ನಿನಗೆ ನಿಜವಾದ ಬೆಲೆ.
ವಿದ್ಯೆ ಯೆಂಬುದು ಸಾಗರ,
ಈಜಲು ಬಲು ಬೇಸರ,
ಈಜಿ ದಡ ಸೇರಿದರೆ ಸಿಗುವುದು ಸುಖಸಾಗರ,
ವಿದ್ಯೆಯೆಂಬುದು ಸಾಧಕನ ಸೊತ್ತೇ ಹೊರತು,
ಸೋಮಾರಿಯ ಸೊತ್ತಲ್ಲ.
ವಿದ್ಯೆಯೇ ಹೂ ವಿದ್ಯಾರ್ಥಿಯೇದುಂಬಿ,
ಆಸ್ತಿ ಅಂತಸ್ತು ಆರುದಿನ,
ಸಂಪತ್ತು ಮೂರುದಿನ,
ವಿದ್ಯೆ ಅನುದಿನ.

**ಸಂಗ್ರಹ : ಶ್ರೀದೇವಿ 9ನೇ ತರಗತಿ**
**ಸ.ಹಿ.ಪ್ರಾ ಶಾಲೆದೇವಿಪುರ**

*ಶಾಲೆಯಲ್ಲಿ ಯಾವುದು ಕಲಿಯುತ್ತಾರೆ ಎಂಬುವುದು ಮುಖ್ಯವಲ್ಲ. ಹೇಗೆ ಕಲಿಯುತ್ತಾರೆ ಎಂಬುವುದು ಮುಖ್ಯ– ಥಾಮಸ್ ಹಕ್ಸಲಿ*





# ಭ್ರಷ್ಟಾಚಾರ




**ಭಾ**ರತವು ಪ್ರಜಾಪ್ರಭುತ್ವ ದೇಶ ಬೇರೆ ದೇಶದಲ್ಲಿ ಇಲ್ಲದಷ್ಟು ಭ್ರಷ್ಟಾಚಾರ ಇಲ್ಲಿ ನಡೆಯುತ್ತದೆ. ಚುನಾವಣೆಗೆ ನಿಲ್ಲುವವರು ಶ್ರೀಮಂತರು ಮಾತ್ರ. ಬಡವರಿಗೆ ಪ್ರಾಮಾಣಿಕತನದ ಬೆಂಬಲ ಮಾತ್ರ ಇರುತ್ತದೆ. ಆದರೆ ಹಣದ ಬೆಂಬಲ ಇರುವುದಿಲ್ಲ. ಸಂಪತ್ತನ್ನು ಪಡೆದವರು ಹೆಚ್ಚಿಗೆ ಹಣ ಖರ್ಚು ಮಾಡಿ ಅಧಿಕಾರಕ್ಕೆ ಬರುತ್ತಾರೆ. ಶಿಕ್ಷಣವಿರದ ಮುಗ್ಧ ಜೀವಿಗಳ ಅಮೂಲ್ಯವಾದ ಮತವನ್ನು ಹಣದಿಂದ ಕೊಂಡುಕೊಳ್ಳುತ್ತಾರೆ. ಅಧಿಕಾರಕ್ಕೆ ಬಂದ ನಂತರ ಖರ್ಚು ಮಾಡಿದ ಹಣವನ್ನು ಸಂಗ್ರಹಿಸಲು ಭ್ರಷ್ಟಾಚಾರಕ್ಕೆ ತೊಡಗುತ್ತಾರೆ. ಅಧಿಕಾರದ ಅವಧಿಯಲ್ಲಿಯೇ ಹಣ ಸಂಗ್ರಹಣೆ ಮಾಡಿಕೊಳ್ಳಲು ವಾಮಮಾರ್ಗವನ್ನು ಅನುಸರಿಸುತ್ತಾರೆ. ಅಧಿಕಾರಿಗಳು ಅಧಿಕಾರದ ಮದದಿಂದ ಕೊಬ್ಬಿ ಹೋಗಿದ್ದಾರೆ. ಬಡವರ ರಕ್ತಹೀರಲಿಕ್ಕೂ ಹೇಸದವರಾಗಿ ಭ್ರಷ್ಟಾಚಾರಿಗಳಾಗಿದ್ದಾರೆ. ಇಲ್ಲಿ ಲಂಚದ ಹೊಗೆ ತುಂಬಿ ಹೋಗಿದೆ. ಪ್ರತಿಯೊಬ್ಬರೂ ಲಂಚಕ್ಕಾಗಿ ಬಾಯಿ ಬಿಡುವವರೇ ಆಗಿದ್ದಾರೆ. ಯಾವುದೇ ವರ್ಗದ ಅಧಿಕಾರಿಯಾಗಿದ್ದರು ಸಹ ಆತ ಲಂಚಗುಳಿಯಾಗಿದ್ದರೆ ಆತನ ಮೇಲೆ ಲೋಕಾಯುಕ್ತರಿಗೆ ದೂರುಕೊಟ್ಟು ವಿಚಾರಣೆಗೆ ಗುರಿಪಡಿಸಿ ಉಗ್ರಶಿಕ್ಷೆ ವಿಧಿಸಬೇಕು. ರಾಜಕಾರಣಿಗಳು ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಪಕ್ಷಾಂತಗೊಳ್ಳುವುದನ್ನು ತಪ್ಪಿಸಬೇಕು. ಜನತೆಯ ಮೇಲೆ ಹೆಚ್ಚಿಗೆ ತೆರಿಗೆ ಹಾಕುವದನ್ನು ನಿಲ್ಲಿಸಬೇಕು. ತಂತ್ರ ನಿಪುಣರಾದ ಅಧಿಕಾರಿ ವರ್ಗ, ಮಂತ್ರಿವರ್ಗ ಯಾವುದೇ ಭ್ರಷ್ಟಾಚಾರವನ್ನು ಮಾಡಿ ಸಿಕ್ಕಿಬಿದ್ದರೂ ಸುಲಭವಾಗಿ ತಮ್ಮ ಅಧಿಕಾರದ ಪ್ರಭಾವದಿಂದ ಹೊರಬರುವರು. ಯಾವುದೇ ಒಂದು ಕೆಲಸವಾಗಬೇಕಾದರೆ ಜನಸಾಮಾನ್ಯರಿಂದ ಸಾಕಷ್ಟು ಹಣ ಪಡೆಯುವರು. ಅವರೇ ತಮ್ಮ ಕೆಲಸ ಬೇಗನೆ ಆಗಬೇಕೆಂಬ ಆಸೆಯಿಂದ ನೀಡುವರು. ಇದರಿಂದ ಲಂಚಕ್ಕೆ ಪ್ರೋತ್ಸಾಹ ದೊರಕುತ್ತಿದೆ. ವ್ಯಾಪಾರಸ್ಥರು ಯಾವುದೇ ವರ್ಗದ ಜನರು ತಮ್ಮ ವರ್ಗಾವಣೆಗಾಗಿ ಲೈಸನ್ಸ್ ಗಾಗಿ ಇನ್ನಿತರ ಯಾವುದೇ ಕಾರ್ಯಗಳಿಗೆ ಲಂಚವನ್ನು ಕೊಟ್ಟು ಕೊಟ್ಟು ಭ್ರಷ್ಟಾಚಾರ ಲಂಚತನಕ್ಕೆ ಪರೋಕ್ಷವಾಗಿ ಎಣ್ಣೆ ಸುರಿಯುತ್ತಾ ಬಂದಿದ್ದಾರೆ. ಇಂದು ಲಂಚ ಮಂಚವನ್ನೇರಿ ಕುಳಿತಿದೆ. ಭ್ರಷ್ಟಾಚಾರ ಬಾನೆತ್ತರಕ್ಕೆ ಏರಿದೆ. ಅದ್ದರಿಂದ ಲಂಚ ತೆಗೆದುಕೊಳ್ಳುವದು ಎಷ್ಟು ಪಾಪತನವೋ ಅಷ್ಟೇ ಲಂಚ ನೀಡುವದೂ ಕೂಡ ಅಕ್ಷಮ್ಯ ಅಪರಾಧ. ಭ್ರಷ್ಟಾಚಾರದ ವಿರುದ್ಧ ಮೊನ್ನೆ ಅಣ್ಣಾ ಹಜಾರೆಯವರು ಉಪವಾಸ ಸತ್ಯಾಗ್ರಹದ ಮೂಲಕ ಹದಿಮೂರು ದಿನ ಹೋರಾಟ ಮಾಡಿದರು. ಆದ್ದರಿಂದ ಸಮಾಜವೂ ಜಾಗೃತವಾಗಿದ್ದು ಭ್ರಷ್ಟಾಚಾರ ನಿಲ್ಲಿಸಲು ಮುಂದೆ ಬರಬೇಕು. ಇಂದಿನ ಮಕ್ಕಳು ಮುಂದಿನ ಪ್ರಜೆಗಳಾದ ನಾವು ಮುಂದಿನ ದಿನಗಳಲ್ಲಿ ಈ ಭ್ರಷ್ಟಾಚಾರವನ್ನು ಕಿತ್ತೊಗೆಯಲು ಇಂದಿನಿಂದ ಪ್ರಯತ್ನ ಪಡೋಣ.

**ಲಿಂಗನಗೌಡ, 6ನೆ ತರಗತಿ**
ಸ.ಹಿ.ಪ್ರಾ.ಶಾಲೆ ಉದ್ಬಾಳ್

# ಮಹಾತ್ಮ ಗಾಂಧೀಜಿ



**ಮ**ಹಾತ್ಮ ಗಾಂಧೀಜಿಯವರ ಪೂರ್ಣ ಹೆಸರು ಮೋಹನದಾಸ್ ಕರಂಚಂದ ಗಾಂಧೀ. ಜನನ ಅಕ್ಟೋಬರ 2, 1869. ಜೀವನ ಪರ್ಯಾಂತ ಸತ್ಯ, ಧರ್ಮ, ಆಹಿಂಸೆಗಳನ್ನು ಚಾಚೂ ತಪ್ಪದೇ ಪಾಲಿಸಿ ಆಹಿಂಸೆಯಿಂದಲೇ ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವಲ್ಲಿ ಯಶಸ್ಸು ಕಂಡರು. ಅದರಿಂದಲೇ ಅವರನ್ನು ಭಾರತದ ರಾಷ್ಟ್ರಪಿತ ಎಂದು ಕರೆಯಲಾಗುತ್ತದೆ.



ಬಾಲ್ಯದಿಂದಲೇ ಸತ್ಯಹರಿಚಂದ್ರ ನಾಟಕ ನೋಡಿ ಪ್ರಭಾವಿತರಾದ ಅವರು ಸತ್ಯವನ್ನು ಹೇಳುವುದನ್ನು ಜೀವನ ಪರ್ಯಂತ ಪಾಲಿಸಿದರು. ಬ್ರಿಟೀಷರು ಉಪ್ಪಿನ ಮೇಲೆ ವಿಧಿಸಿದ ತೆರಿಗೆಯನ್ನು ವಿರೋಧಿಸಿ ಉಪ್ಪಿನ ಸತ್ಯಾಗ್ರಹವನ್ನು ನಡೆಸಿ ಯಶಸ್ವಿಯಾದರು. ದಕ್ಷಿಣ ಆಫ್ರಿಕಾದಲ್ಲಿರುವಾಗ ಅಲ್ಲಿನ ವರ್ಣ ಭೇದ ನೀತಿಯನ್ನು ಖಂಡಿಸಿ ಅದನ್ನು ಹೋಗಲಾಡಿಸುವಲ್ಲಿ ಸಫಲರಾದರು. ಎಂದಿಗೂ ಸತ್ಯ ಧರ್ಮಕ್ಕಾಗಿಯೇ ಹೋರಾಟ ಮಾಡಿದ ಅವರು ಬ್ರಿಟೀಷರಿಂದ ಜೈಲುವಾಸ ಅನುಭವಿಸಬೇಕಾಯಿತು. "ಮೈ ಎಕ್ಸ್ ಪೆರಿಮೆಂಟ್ಸ್ ವಿತ್ ಟ್ರುತ್" ( ಸತ್ಯದೊಂದಿಗೆ ನನ್ನ ಅನುಭವಗಳು) ಎನ್ನುವ ಪುಸ್ತಕ ಬರೆದರು. ಶ್ರೀರಾಮ ಭಕ್ತರಾಗಿದ್ದ ಅವರು ಜನವರಿ 30 1948 ರಂದು ದೇವಸ್ಥಾನಕ್ಕೆ ಹೋಗಿ ಪ್ರಾರ್ಥನೆಯನ್ನು ಮುಗಿಸಿಕೊಂಡು ಬರುವಾಗ ನಾಥರಾವ್ ಗೋಡ್ಸೆ ಎಂಬ ವ್ಯಕ್ತಿಯು ಗುಂಡೇಟಿನಿಂದ ಬಲಿಯಾದರು. ಅವರ ಜನ್ಮದಿನವನ್ನು 'ರಾಷ್ಟ್ರೀಯ ಅಹಿಂಸೆ ದಿನಾಚರಣೆ' ಎಂದು, ಅವರು ಗುಂಡೇಟಿಗೆ ಬಲಿಯಾದ ದಿನವನ್ನು 'ಹುತಾತ್ಮರ ದಿನಾಚರಣೆ' ಎಂದು ಆಚರಿಸಲಾಗುವುದು.

**ನಾಗಲಿಂಗ ಬೆಳವಾಟ ೬ನೇ ತರಗತಿ**
**ಸ.ಹಿ.ಪ್ರಾ.ಶಾಲೆ ಉಟಕನೂರು.**

| | |
|---|---|
| ಉಪಾಧ್ಯಾಯರು: | ಶಾಲೆಯಲ್ಲಿ ಮಕ್ಕಳು ಬಳಸುವ ಏಕೈಕ ಪದ ಯಾವುದು ರವಿ. |
| ರವಿ: | ಗೊತ್ತಿಲ್ಲ ಸರ್. |
| ಉಪಾಧ್ಯಾಯರು: | ಭೇಷ್ ಸರಿಯಾದ ಉತ್ತರ ನೀಡಿದೆ |



**ಸಂಗ್ರಹ: ಶಾಮ್ ೬ನೇ ತರಗತಿ**
**ಸ.ಹಿ.ಪ್ರಾ ಶಾಲೆ ಜೀನೂರು**



***ಪರೀಕ್ಷೆಗಾಗಿ ಮಾತ್ರ ಓದುವುದೇಂದರೆ ಕೂಲಿ ಕೆಲಸ ಮಾಡಿದಂತೆ–ವಿ.ಎಮ್. ಇನಾಂದರ್***





# ಬೆಲೆ ಏರಿಕೆ



ಇಂದಿನ ಆಧುನಿಕ ಯುಗದಲ್ಲಿ ಎಲ್ಲವುಗಳಲ್ಲೂ ಸ್ಪರ್ಧೆ ಇದೆ. ಪ್ರತಿಯೊಂದರಲ್ಲೂ ಬೆಳವಣಿಗೆ ಇದೆ. ಇದು ಅಭಿವೃದ್ಧಿ ದೃಷ್ಟಿಯಿಂದ ಒಳ್ಳೆಯದು. ಆದರೆ ಜೊತೆ ಜೊತೆಯಲಿ ನಾನೇನು ಯಾರಿಗೂ ಕಡಿಮೆ ಇಲ್ಲ ಎಂದು ಬೆಲೆಯು ಕೂಡ ಸ್ಪರ್ದೆಯಲ್ಲಿ ಎಲ್ಲದರಲ್ಲೂ ನಾನೇ ವಿಜಯ ಎನ್ನುವ ರೀತಿಯಲ್ಲಿ ದಿನದಿಂದ ದಿನಕ್ಕೆ ಶರವೇಗದಲ್ಲಿ ಬೆಳೆಯುತ್ತಿದೆ. ಇದು ಮನುಷ್ಯನ ಮೂಲಭೂತ ಅವಶ್ಯಕತೆಗಳನ್ನು ಸಹ ಪೂರೈಸಿಕೊಳ್ಳಲಾಗದ ಪರಸ್ಥಿತಿಗೆ ಬೆಲೆ ಏರಿಕೆಗಳು ಆಗಿವೆ. ನಮ್ಮ ದೇಶದ ಜನಸಂಖ್ಯೆಗೆ ತಕ್ಕಂತೆ ಆಹಾರ ಪದಾರ್ಥಗಳು ಉತ್ಪಾದನೆ ಆಗದಿರುವುದು, ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗಿವೆ.

ಬೆಲೆ ಏರಿಕೆ ಎಂದರೆ ಬಡಪಾಯಿಗಳಾದ ಜನಸಾಮಾನ್ಯರು ಬೆಚ್ಚಿಬೀಳುವಂತಾಗಿದೆ. ಬೇಕಾದ ವಸ್ತುಗಳ ಬೆಲೆ ಲೆಕ್ಕವಿರದಂತೆ ಏಣಿಯ ರೀತಿಯಲ್ಲಿ ಹಲವು ದಿನಗಳಿಂದ ಹಂತ ಹಂತವಾಗಿ ಏರುತ್ತಿರುವುದೇ ಬೆಲೆ ಏರಿಕೆ. ಇಂದು ಅಗತ್ಯ ವಸ್ತುಗಳ ಬೆಲೆ ನಮಗೆ ಗಗನ ಕುಸುಮವಾಗಿ ಕೈಗೆ ಎಟುಕದ ರೀತಿಯಲ್ಲಿ ಬೆಲೆಗಳು ತಾರಕಕ್ಕೆ ಏರಿ ಆಕಾಶದಲ್ಲಿ ವಿಜೃಂಭಿಸುತ್ತವೆ. ಜನರ ಸಾಮಾನ್ಯ ಬದುಕು ಇಂದು ದುಸ್ತರವಾಗಿದೆ. ಮತ್ತು ಪ್ರತಿನಿತ್ಯ ಒಂದಲ್ಲ ಒಂದು ವಸ್ತುವಿನ ಬೆಲೆ ಏರಿಕೆ ಆಗಿರುವುದನ್ನು ದಿನನಿತ್ಯ ಇತ್ತೀಚಿನ ಸಮೂಹ ಸಂಪನ್ಮೂಲಗಳಿಂದ ತಿಳಿದುಕೊಳ್ಳಬಹುದು. ಇಂದು ನಮಗೆ ಅಗತ್ಯ ವಸ್ತುಗಳ ಬೆಲೆ ಇಂದು ರಾಮಾಯಣದ ಹನುಮಂತನ ಬಾಲದಂತೆ ಬೆಳೆಯುತ್ತಿದೆ. ಮುಂದೆ ಕೂಡ ಬೆಳೆಯುತ್ತಾ ಹೋಗಬಹುದು. ಅಕ್ಕಿ 1 ಕೆ.ಜಿ. 25/ರೂ ಆದರೆ ಇಂದು 45/ರೂ ಆಗಿರುವುದು, ಇದು ವಿಪರ್ಯಾಸವೇ ಸರಿ. ಬೇಳೆ ಹಿಂದಿನ ಕಾಲದಲ್ಲಿ 35ರೂ 45 ರೂ ಇದ್ದು, ಪ್ರಸ್ತುತ 95ರೂ ಇದೆ. ಎಂದು ಹೇಳಬಹುದು. ಹೀಗೆ ದಿನದಿಂದ ದಿನಕ್ಕೆ ವಸ್ತುಗಳ ಬೆಲೆ ಜಿಗಿಯುತ್ತಿದ್ದರೆ ಒಂದಲ್ಲ ಒಂದು ದಿನ ಹೊಟ್ಟೆಗೆ ತಣ್ಣೀರು ಬಟ್ಟೆ ಕಟ್ಟಿಟ್ಟ ಬುತ್ತಿಯಾಗುತ್ತದೆ. ಪೆಟ್ರೋಲ್ ಬೆಲೆಯೂ ಕೂಡ ತುಂಬಾ ದುಬಾರಿಯಾಗಿದ್ದು ಜನಸಾಮಾನ್ಯರು ದಿನಂಪ್ರತಿ ಗೋಳಿಡುವ ಪರಿಸ್ಥಿತಿ ಒದಗಿದೆ. ಇಂದು ಇದರ ಬೆಲೆ 76/ರೂ ದಾಟಿದೆ. ಇನ್ನು ಬಂಗಾರದ ಬೆಲೆಯ ಬಗ್ಗೆ ಯಾರು ಮಾತನಾಡುವಂತಿಲ್ಲ. 1 ಗ್ರಾಂ. 30.000/ ರೂ ಗಡಿದಾಟುವ ನಿರೀಕ್ಷೆಯಲ್ಲಿದೆ. ಇಂದು ಅಷ್ಟರಮಟ್ಟಿಗೆ ಬೆಲೆಗಳು ಏರತೊಡಗಿವೆ. ಗ್ಯಾಸ್ ಕಾರುಬಾರು 'ಕೀಟ ಸಣ್ಣದಾದರು ಕಾಟ ಬಹಳ' ಎನ್ನುವಂತೆ ಬೆಲೆ ಏರಿಕೆ ಎಂಬ ಎರಡು ಆಕ್ಷರಗಳು ಚಿಕ್ಕದಿರಬಹುದು ಆದರೆ ಅರ್ಥ ತುಂಬಾ ಬೆಲೆ ಮೌಲ್ಯಯುತವಾಗಿರುತ್ತದೆ ಎಂದು ಹೇಳಬಹುದು. ಚಿಕ್ಕ ಮಕ್ಕಳಿಗೆ ಗರ್ಭಿಣಿಯರಿಗೆ ಉತ್ತಮ ಆಹಾರ ದೊರೆಯದೆ ಅನಾರೋಗ್ಯದಿಂದ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಇಂದಿನ ಭಾರತದಲ್ಲಿ ಬಡಬಗ್ಗರು ಜೀವನ ನಡೆಸುವುದೆ ನರಕ ಸದೃಶ್ಯವಾಗುತ್ತಿದೆ. ಭಾರತದಲ್ಲಿ ಅನೇಕ ಸಮಸ್ಯೆಗಳಿದ್ದು ಇಂದು ಬಾಲ್ಯವಿವಾಹ, ಬಾಲಕಾರ್ಮಿಕತೆ, ಲಂಚ, ಭ್ರಷ್ಟಾಚಾರ, ನಿರುದ್ಯೋಗ ಇವುಗಳು ಬೆಲೆ ಏರಿಕೆಯಿಂದ ದೇಶದಲ್ಲಿ ತಲೆ ಎತ್ತಿ ನಿಂತಿವೆ. ಇದರಿಂದ ಸರ್ಕಾರ ಎಚ್ಚೆತ್ತು ಸಾಕಷ್ಟು ಪ್ರಮಾಣದ ಆಹಾರ ಧಾನ್ಯಗಳನ್ನು ಪೂರೈಸಬೇಕು. ನಂತರದಲ್ಲಿ ನಮ್ಮ ಜನಸಾಮಾನ್ಯರು ಈಗಿನ ಒಂದು ಕಾಲದಲ್ಲಿ "ಅಗ್ಗದ ಆಸೆಗೆ ಮುಗ್ಗಿದ ಜೋಳ' ಎಂಬ ನಾಣ್ನುಡಿಯಂತೆ ಕಡಿಮೆ ಬೆಲೆಯ ವಸ್ತುಗಳನ್ನು ಕೊಳ್ಳುತ್ತಿದ್ದಾರೆ. ಜನಸಾಮಾನ್ಯರೇ ಆದರೂ 'ಆರೋಗ್ಯವೇ ಭಾಗ್ಯ' ಎಂಬಂತೆ ದುಡ್ಡನ್ನು ತೆತ್ತು ಬೆಲೆ ಏರಿಕೆ ಎಂಬ 'ತಿಮಿಂಗಿಲ' ಬಾಯಿಗೆ ಬೀಳಬೇಕಾಗುತ್ತದೆ. ರಾಯಚೂರು, ಕೊಪ್ಪಳ, ಗಂಗಾವತಿಯಲ್ಲಿ ಅತೀ ಹೆಚ್ಚು ಅಕ್ಕಿಯನ್ನು ಉತ್ಪಾದಿಸುತ್ತಿದ್ದು ವಿಪರ್ಯಾಸವೆಂದರೆ ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲಿಲ್ಲ ಎಂಬಂತೆ ನಮ್ಮ ರೈತರು ಬೆಳೆದಿದ್ದರು ನಮ್ಮ ಕೈಗೆ ಅವುಗಳ ದರ್ಶನವಾಗಬೇಕಾದರೆ ನಾವು ನಮ್ಮ ದುಡ್ಡನ್ನು ಕೊಟ್ಟು ತರಬೇಕಾಗುತ್ತದೆ. ಸರ್ಕಾರವು ಆಹಾರ ಧಾನ್ಯಗಳನ್ನು ಜನರಿಗೆ ಪೂರೈಸಬೇಕು.


**ಉಪ್ಪಾಳೆಪ್ಪ 7ನೆ ತರಗತಿ**
**ಸ.ಹಿ.ಪ್ರಾ.ಶಾಲೆ ಮುದ್ದನಗುಡಿ**


## ಆರೋಗ್ಯ ಭಾಗ್ಯ



ಒಂದು ಹೊತ್ತು ಉಂಡವನು ಯೋಗಿ,
ಏರಡು ಹೊತ್ತು ಉಂಡವನು ಭೋಗಿ,
ಮೂರು ಹೊತ್ತು ಉಂಡವನು ರೋಗಿ
ನಾಲ್ಕು ಹೊತ್ತು ಉಂಡವನನ್ನು ಹೊತ್ತುಕೊಂಡು ಹೋಗಿ.


**ಸಂಗ್ರಹ: ಮಲ್ಲಪ್ಪ 6ನೇ ತರಗತಿ**
**ಸ.ಹಿ.ಪ್ರಾ ಶಾಲೆ ಮರಕಂದಿನ್ನಿ**


## ವಿದ್ಯಾಭ್ಯಾಸದ ಸಾಧನೆಗೆ ಕಲಿಯಿರಿ



**ಕಲಿಯಲು ಮೂರು ದಾರಿ,**
**ನೋಡಿ ಕಲಿಯಿರಿ,**
**ಮಾಡಿ ಕಲಿಯಿರಿ,**
**ಕೇಳಿ ಕಲಿಯಿರಿ,**
**ದಿವ್ಯ ಶಕ್ತಿ ಪಡೆಯಿರಿ.**


**ಸಂಗ್ರಹ: ಬಸವ 6ನೇ ತರಗತಿ**
**ಸ.ಹಿ.ಪ್ರಾ ಶಾಲೆ ಜೀನೂರು**




*ಹವ್ಯಾಸದ ಶಕ್ತಿ ಮಹತ್ವವಾದುದು, ಅದು ನಮಗೆ ಕಷ್ಟವನ್ನು ಹೆದುರಿಸುವ ಮತ್ತು ಗಾಯ ಹಾಗೂ ನೋವನ್ನು ಸಹಿಸುವುದನ್ನು ಕಲಿಸುತ್ತದೆ.-ಸಿಸಿರೋ*



# ಮನುಷ್ಯನ ಹವ್ಯಾಸಗಳು

ನಾವು ಜನಿಸುವುದು ಯಶಸ್ವಿ ಜೀವನ ನಡೆಸಲು ನಾವು ಯಶಸ್ಸುಗಳಿಸುವದಕ್ಕಾಗಿ ಹುಟ್ಟಿದ್ದೇವೆ. ಆದರೂ ಸೋಲಿಗೆ ಯಾವತ್ತೋ ಸೋತಿದ್ದೇವೆ. ಯಾರನ್ನೋ ನಾವು ಆ ವ್ಯಕ್ತಿ ಆದೃಷ್ಟಶಾಲಿ ಮುಟ್ಟಿದೆಲ್ಲ ಚಿನ್ನವಾಗುತ್ತದೆ ಅಥವಾ ಅವನು ನತದೃಷ್ಟ ಎನೇ ಮಾಡಿದರು ಕೆಟ್ಟದ್ದಾಗುತ್ತದೆ ಎಂಬ ಮಾತುಗಳನ್ನು ನಾವು ಆಗಾಗ್ಗೆ ಕೇಳುತ್ತೇವೆ. ಇಂತ ಮಾತುಗಳಲ್ಲಿ ಸತ್ಯ ಇರುವುದಿಲ್ಲ. ಏಕೆಂದರೆ ಈ ಬಗ್ಗೆ ಯೋಚಿಸಿದಾಗ ಯಶಸ್ವಿ ಮನುಷ್ಯನು ಪ್ರತಿಬಾರಿ ಸರಿಯಾದ ಮಾರ್ಗವನ್ನು ಆರಿಸಿಕೊಳ್ಳುತ್ತಾನೆ. ಅಂತಹ ಯಶಸ್ಸು ಇಲ್ಲದವನು ಪದೇ ಪದೇ ತಪ್ಪು ಮಾಡಿ ಸೋಲಿಗೆ ಒಳಗಾಗುತ್ತಾನೆ.

ಯಾವುದನ್ನೇ ಆಗಲಿ ನಾವು ಸರಿಯಾದ ರೀತಿಯಲ್ಲಿ ಅಭ್ಯಾಸ ಮಾಡುತ್ತಾ ಬಂದರೆ ಅದು ತನ್ನದೇ ನಿಶ್ಚಿತ ರೂಪ ಪಡೆಯುತ್ತದೆ. ಕೆಲವರು ತಪ್ಪನ್ನೇ ಮತ್ತೆ ಮತ್ತೆ ಮಾಡುತ್ತಿರುತ್ತಾರೆ. ಹಾಗಾಗಿ ಅವರು ತಪ್ಪು ಮಾಡುವದರಲ್ಲಿ ಪರಿಪೂರ್ಣರಾಗಿರುತ್ತಾರೆ. ಹೀಗೆ ಮಾಡುತ್ತಾ ಬಂದರೆ ತಪ್ಪುಗಳು ಸಂಪೂರ್ಣ ಮತ್ತು ಸ್ವಯಂಚಾಲಿತವಾಗುತ್ತದೆ.

ಹವ್ಯಾಸಗಳನ್ನು ಬೆಳೆಸಿಕೊಳ್ಳುವದೆಂದರೇ ಭೂಮಿಯನ್ನು ಉಳುಮೆ ಮಾಡಿದಂತೆ ಅದಕ್ಕೆ ತುಂಬಾ ಸಮಯ ಬೇಕಾಗುತ್ತದೆ. ಆದರೆ ಬೀಜ ಭೂಮಿಯೊಳಗೆ ಮೊಳಕೆಯೊಡೆಯುತ್ತದೆ. ಅದೇ ರೀತಿ ಹವ್ಯಾಸಗಳಿಂದ ಇನ್ನಷ್ಟು ಹವ್ಯಾಸಗಳನ್ನು ಬೆಳೆಸಿಕೊಳ್ಳಬಹುದು. ಯಾವುದೇ ಮನುಷ್ಯನಿಗೆ ಆಗಲಿ ಉತ್ತೇಜನ ತುಂಬುವ ಒಳ್ಳೆಯ ಗುಣ ಇರಬೇಕು. ಉತ್ತೇಜನ ಮನುಷ್ಯನನ್ನು ಕೆಲಸಗಳಲ್ಲಿ ಆಸಕ್ತಿಯನ್ನು ಮೂಡಿಸುತ್ತದೆ. ಅದೇ ರೀತಿ ಉತ್ಸಾಹವು ಆ ಕೆಲಸಕ್ಕೆ ಹೊಂದಿಕೊಳ್ಳುವಂತೆ ಮಾಡುತ್ತದೆ. ಅದೇ ರೀತಿ ಹವ್ಯಾಸವು ರೂಢಿಯಾಗುತ್ತದೆ.

ಯಾವಾಗಲೇ ಆಗಲಿ ಎದುರಾಗುವ ಅಪಾಯದಿಂದ ಒಳ್ಳೆಯದಾಗುತ್ತದೆಯೋ ಅಥವಾ ಕೆಟ್ಟದಾಗುತ್ತದೆಯೋ ಅದು ಬೇರೆ, ಆದರೆ ಯಾವುದೇ ಕಾರಣಕ್ಕಾಗಲಿ ನಾವು ಮಾನವೀಯತೆ ಮತ್ತು ನಡತೆಯನ್ನು ಎಂದಿಗೂ ಕಳೆದು ಕೊಳ್ಳಬಾರದು. ಅಪನಂಬಿಕೆ ಅಪ್ರಾಮಾಣಿಕತೆ ತೋರಿಸುತ್ತದೆ. ಹಾಗೆ ಕೆಟ್ಟ ಗುಣಗಳನ್ನು ಇಟ್ಟುಕೊಂಡು ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡುವದಕ್ಕೆ ಕಷ್ಟವಾಗುತ್ತದೆ. ಅಂತವರು ಒಳ್ಳೆಯದನ್ನು ಮಾಡಬೇಕು ಅಂತ ಅಂದುಕೊಂಡರು ಸಹ ಕೆಲವೊಂದು ಸಲ ತದ್ವಿರುದ್ಧವಾಗಿ ನಡೆಯುತ್ತದೆ.

ಒಂದು ಸಲ ಸುಳ್ಳು ಹೇಳಲು ನಮಗೆ ನಾವೇ ಒಪ್ಪಿಗೆ ನೀಡಿದರೆ ಎರಡು ಮತ್ತು ಮೂರನೇ ಬಾರಿಗೆ ಇನ್ನೂ ಸುಲಭವಾಗಿ ಸುಳ್ಳು ಹೇಳುತ್ತವೆ. ಕೊನೆಗೆ ಅದೇ ಹವ್ಯಾಸವಾಗುತ್ತದೆ. ಸತತ ಪ್ರಯತ್ನ ಮತ್ತು ಕೆಟ್ಟ ಗುಣಗಳಿಂದ ದೂರವಿರುವ ವಿಷಯದಲ್ಲಿ ಯಶಸ್ಸು ಅಡಗಿದೆ. ಯಾವುದೇ ಒಂದು ಅಭ್ಯಾಸವನ್ನು ನಾವು ಹೆಚ್ಚು ಸಮಯ ರೂಢಿಸಿಕೊಂಡರೆ ಅದು ನಮ್ಮ ಒಂದು ಬದುಕಿನ ಭಾಗವಾಗುತ್ತದೆ ಅಥವಾ ಹವ್ಯಾಸವಾಗಿ ಬೆಳೆಯುತ್ತದೆ. ಒಬ್ಬ ಮನುಷ್ಯನು ಹೆಚ್ಚಿನ ಕೆಲಸಗಳಲ್ಲಿ ಪ್ರಾಮಾಣಿಕನ್ನಾಗಿದ್ದು ಮೊದಲ ಬಾರಿ ಸುಳ್ಳು ಹೇಳಿದ್ದರೂ ಸಿಕ್ಕಿ ಬೀಳುತ್ತಾನೆ. ನಮಗೆ ನಾವೇ ಇತರರೊಂದಿಗೆ ಪ್ರಾಮಾಣಿಕನಾಗಿರುವುದು ಅಥವಾ ಅಪ್ರಮಾಣಕನಾಗಿರುವುದು ಇವೆರಡು ಹವ್ಯಾಸಗಳಾಗುತ್ತವೆ.

ಪ್ರತಿಯೊಬ್ಬರ ಯೋಚಿಸುವ ಗುಣ ಅವರ ಕೆಲಸ ಕಾರ್ಯಗಳನ್ನು ನಿರ್ಧರಿಸುತ್ತದೆ. ನಮ್ಮ ಕೆಲಸ ಕಾರ್ಯಗಳು ಹವ್ಯಾಸದ ಕಡೆ ಕರೆದುಕೊಂಡು ಹೋಗುತ್ತದೆ. ಪ್ರತಿಯೊಂದು ಹವ್ಯಾಸಗಳು ನಮ್ಮ ವ್ಯಕ್ತಿತ್ವದ ಪ್ರತೀಕವಾಗುತ್ತವೆ ಎಂದು ಹಿರಿಯರು ಹೇಳುತ್ತಾ ಬಂದಿದ್ದಾರೆ ಹಾಗೆಯೇ ಯಾವುದೇ ಮನುಷ್ಯನಿಗೆ ಒಂದಲ್ಲ ಒಂದು ಹವ್ಯಾಸಗಳು ಇರಲೇಬೇಕು ಎಂದು ಹೇಳುತ್ತೇವೆ.




ಪ್ರತಿಯೊಬ್ಬ ಮನುಷ್ಯನಿಗೆ ಒಂದು ಹವ್ಯಾಸ ಇದ್ದೆ ಇರುತ್ತದೆ. ಅದು ಕೆಲವರಿಗೆ ಬದುಕಿಗೆ ದಾರಿ ದೀಪಾವಾಗುತ್ತದೆ. ಇನ್ನೂ ಕೆಲವರಿಗೆ ಮುಳ್ಳಾಗಿ ಪರಿಣಮಿಸುತ್ತದೆ. ಯಾಕೆಂದರೆ ಕೆಲವರು ತಮ್ಮ ಹವ್ಯಾಸದಿಂದ ತಮ್ಮ ಬದುಕನ್ನು ಕಟ್ಟಿಕೊಳ್ಳುತ್ತಾರೆ. ಅದು ಅವರ ಬದುಕಿಗೆ ಪ್ರೇರಣೆಯಾಗುತ್ತದೆ. ಇನ್ನೂ ಕೆಲವರು ತಮ್ಮ ಹವ್ಯಾಸವನ್ನು ಸುಳ್ಳು ಮೋಸ ವಂಚನೆಯನ್ನು ಮಾಡುತ್ತಾ ಬದುಕನ್ನು ಕಟ್ಟಿಕೊಳ್ಳುತ್ತಾರೆ. ಅಂತಹ ಹವ್ಯಾಸ ಅವರಿಗೆ ಮುಳ್ಳಾಗಿ ಪ್ರೇರೇಪಿಸುತ್ತವೆ.

**ಜೆಸ್ಸಿಂತಾ ವಿಮುಕ್ತಿ ಸಿಬ್ಬಂದಿ**




**ರಾಜಶೇಖರ, ೪ನೇ ತರಗತಿ,**
**ಸ.ಹಿ.ಪ್ರಾ., ಶಾಲೆ, ಪೋತ್ನಾಳ್**



**ಮೌನಪ್ಪ, ೫ನೇ ತರಗತಿ**
**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ,**
**ಪೋತ್ನಾಳ್**

***ಮಾನವ ಸ್ವಾಭಾವ ಮೂಲತಃ ಒಂದೇ ಅವನ ಹವ್ಯಾಸಗಳು ಇತರರಿಂದ ಪ್ರತ್ಯೇಕಿಸುತ್ತದೆ– ಕನ್ಫ್ಯೂಸಿಯಸ್.***

# ಸರ್.ಸಿ.ವಿ.ರಾಮನ್




ಶ್ರೀ ಸಿ.ವಿ.ರಾಮನ್ ರವರ ಜನನ 1888 ನವೆಂಬರ 7ರಂದು ತಮಿಳುನಾಡಿನ ತಿರುಚಿನಪಳ್ಳಿ ಎಂಬ ಪಟ್ಟಣದಲ್ಲಾಯಿತು. ಚಂದ್ರಶೇಖರ ಅಯ್ಯರ್ ಇವರು ಶಾಲಾ ಶಿಕ್ಷಕರಾಗಿದ್ದರು. ತಾಯಿಯ ಹೆಸರು ಪಾರ್ವತಿ. ತಂದೆಯವರು ಮನೆಯಲ್ಲಿಯೇ ಒಂದು ಸ್ವಂತದಾದ ಗ್ರಂಥಾಲಯವನ್ನು ಹೊಂದಿದ್ದರು. ಅದರಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಅನೇಕ ಮಹೋನ್ನತವಾದಂತಹ ಗ್ರಂಥಗಳಿದ್ದವು. ಹೀಗಾಗಿ ರಾಮನ್ ರವರು ಓದುವ ಅಭ್ಯಾಸವನ್ನು ಚಿಕ್ಕಂದಿನಲ್ಲಿಯೇ ರೂಢಿಸಿಕೊಂಡಿದ್ದರು. ಹಾಗೆಯೇ ತಿರುಚಿನಪಳ್ಳಿಯಲ್ಲಿ ವ್ಯಾಸಂಗ ಗೈಯುವ ಸಮಯದಲ್ಲೇ ಅನೇಕ ಶಿಕ್ಷಕರ ಒಲವನ್ನು ಗಳಿಸಿಕೊಂಡಿದ್ದರು. ಅಷ್ಟೊಂದು ಬುದ್ದಿವಂತ ಹುಡುಗನಾಗಿದ್ದ ರಾಮನ್. ತನ್ನ ತರಗತಿಯ ಪಠ್ಯಪುಸ್ತಕದ ಮುಂದಿನ ಪಾಠಗಳನ್ನೆಲ್ಲ ಓದಿ ತಿಳಿದುಕೊಂಡು ಮುಂಚಿತವಾಗಿಯೇ ಅದನ್ನು ಅರಗಿಸಿಕೊಂಡು ಬಿಡುತ್ತಿದರು. ಅದೂ ಸಾಲದೆಂಬಂತೆ ಮುಂದಿನ ತರಗತಿಯ ಪುಸ್ತಕಗಳನ್ನು ಓದಿ ಬಿಡುತ್ತಿದ್ದರು. ರಾಮನ್ ಬಹಳ ಬುದ್ಧಿವಂತ ಹುಡುಗನೆಂದು ಖ್ಯಾತಿಯಾಗಿದ್ದರು. ಎಲ್ಲಾ ವಿಷಯಗಳಲ್ಲಿಯೂ ಹೆಚ್ಚಿನ ಅಂಕಗಳನ್ನು ಪಡೆದಿರುತ್ತಿದ್ದರು.

ರಾಮನ್ ಅವರು ಬರೀ ಪುಸ್ತಕದ ಹುಳವಾಗಿರಲಿಲ್ಲ. ಆಟಗಳಲ್ಲೂ, ಈಜುವುದರಲ್ಲೂ ಬಾಲ್ಯದಲ್ಲಿ ಎಲ್ಲಾ ಮಕ್ಕಳಂತೆ ಗಾಳಿಪಟ ಹಾರಿ ಬಿಡುವುದರಲ್ಲೂ ಚಟುವಟಿಕೆಯಿಂದ ಪಾಲ್ಗೊಳ್ಳುತ್ತಿದ್ದರು. ತಿರುಚಿನಾಪಳ್ಳಿಯಿಂದ ಕರಾವಳಿ ತೀರ ವಿಶಾಖಪಟ್ಟಣಕ್ಕೆ ತಂದೆಯವರು ಹೋದಾಗ. ಸಮುದ್ರ ದಡದಲ್ಲಿದ್ದ ಶಾಲೆಯ ಕಿಟಕಿಯಿಂದ ಸಮುದ್ರವನ್ನು ತದೇಕಚಿತ್ತದಿಂದ ನೋಡುತ್ತಿದ್ದರು. ಯಾವುದೇ ವಿಷಯವನ್ನು ಗಂಬೀರವಾಗಿ ಚಿಂತಿಸುತ್ತಿದ್ದರು. ಮನೆಯಲ್ಲಿ ತಂದೆ ತಾಯಿಗಳಿಬ್ಬರು ಒಳ್ಳೆಯ ವಿದ್ಯಾವಂತರಗಿದ್ದರಿಂದ ಮಗನ ಏಳಿಗೆಗೆ ಪೂರಕವಾಗಬಹುದಾದ ಎಲ್ಲಾ ಅನುಕೂಲತೆಗಳನ್ನು ಒದಗಿಸುತ್ತಿದ್ದರು. ಬೆಳಕಿನ ಚದುರುವಿಕೆ ರಾಮನ್ ಪರಿಣಾಮವೆಂದು ಪ್ರಸಿದ್ಧಿಯಾಯಿತು. ಬೆಳಕಿನ ಕಿರಣವೆಂದರೆ ಪ್ರೋಟಾನ್ ಗಳ ಪ್ರವಾಹ ಈ ಪ್ರೋಟಾನ್ ಗಳ ರಸಾಯನಿಕ ದ್ರವದಲ್ಲಿನ ಅಣುವಿಗೆ ಡಿಕ್ಕಿ ಹೊಡಿದಾಗ ಪ್ರೋಟಾನ್‌ನ ಶಕ್ತಿಯಲ್ಲಿ ಉಂಟಾಗುವ ನಕ್ಷೆ ಮತ್ತು ತತ್ಪರಿಣಾಮವಾಗಿ ವರ್ಣಪಂಕ್ತಿ ರೇಖೆಗಳೇ ರಾಮನ್ ಎಫೆಕ್ಟ್. ಪ್ರೋಟಾನ್‌ಗಳ ಶಕ್ತಿಯ ನಷ್ಟದ ಪ್ರಮಾಣ ರಸಾಯನಿಕ ದ್ರವದ ಅಣುವಿನ ಬಗ್ಗೆ ಮಾಹಿತಿ ನೀಡುತ್ತದೆ. ರಾಮನ್ ರೇಖೆಗಳ ಸಹಾಯದಿಂದ ಪ್ರೋಟಾನ್ ಗಳ ಶಕ್ತಿಯಲ್ಲುಂಟಾದ ನಷ್ಟ ಪ್ರಮಾಣವನ್ನು ನಿರ್ಧರಿಸಿ ದ್ರವ, ಘನ ಮತ್ತು ಅನಿಲ ವಸ್ತುಗಳಲ್ಲಿನ ಅಣುಗಳ ವ್ಯವಸ್ಥೆಯನ್ನು ಅರಿತುಕೊಳ್ಳಬಹುದು. ಹೀಗೆಯೇ ರಾಮನ್ ಎಫೆಕ್ಟ್ ಯಾವುದೇ ವಸ್ತುವಿನ ಆಂತರಿಕ ರಚನೆಯನ್ನು ತಿಳಿದುಕೊಳ್ಳುವಲ್ಲಿ ಪ್ರಯೋಜನಕಾರಿಯಾಗಿದೆ.

ರಾಮನ್ ರವರ ವಿಶೇಷ ಸಂಶೋಧನೆಯಿಂದಾಗಿ ರಸಾಯನಿಕ ಮಾಧ್ಯಮಕ್ಕೆ ರಾಮನ್ ಎಫೆಕ್ಟ್ ಕೊಡುಗೆ 1928 ಫೆಬ್ರವರಿ 28 ರಂದು ಕಂಡು ಹಿಡಿದು ಕೊಡುಗೆಯಾಗಿ ನೀಡಿದರು. ಪ್ಲಾಸ್ಟಿಕ್, ಕಲರ್ ಫೋಟೋಗ್ರಾಫ್, ಸಿಂಪ್ರೇಟಿಕ್ ಉತ್ಪಾದನೆಗೆ ಸಾಧ್ಯವಾಯಿತು. ರಾಮನ್ ರ ಈ ಸಾಧನೆಗಾಗಿ ವಿಶ್ವದಾದ್ಯಂತ ಅನೇಕ ವಿಜ್ಞಾನಿಗಳು ಇವರನ್ನು ಮುಕ್ತ ಕಂಠದಿಂದ ಹೊಗಳಿದರು. ಅಲ್ಬರ್ಟ್ ಐನ್‌ಸ್ಟೀನ್ ಅವರು ಸ್ವತ: ರಾಮನ್ ರನ್ನು ಅಭಿನಂದಿಸಿದರು. ಪ್ರತಿಷಿತ ನೇಚರ್ ಪತ್ರಿಕೆ ರಾಮನ್ ಸಂಶೋಧನೆಯನ್ನು ಪ್ರಕಟಿಸಿತು. ಇಂತಹ ಎಫೆಕ್ಟ್ ಕಂಡು ಹಿಡಿಯಲು ಅತ್ಯಂತ ಸರಳ ಉಪಕರಣಗಳನ್ನು ಬಳಸಿದು ಇನ್ನೂ ವಿಶೇಷ. ರಾಮನ್ ರವರೇ ಒಂದೆಡೆ ಹೇಳುತ್ತಾರೆ. ನಾನು ಸಂಶೋಧನೆಗಾಗಿ ಹೆಚ್ಚೆಂದರೆ 200 ರೂ ವೆಚ್ಚ ಮಾಡಿರಬಹುದು ಎಂದು. ತಮ್ಮ ಕಾರ್ಯದ ಬಗ್ಗೆ ಅಚಲವಾಗಿ ವಿಶ್ವಾಸ ಹೊಂದಿದ ರಾಮನ್ ನೊಬೆಲ್ ಪ್ರಶಸ್ತಿ ಬಂದೇ ತೀರುವುದೆಂದು ಹೇಳಿದ್ದರು. ಕೇವಲ 42 ವಯಸ್ಸಿನಲ್ಲಿ ಭೌತಶಾಸ್ತ್ರದ ಬಗ್ಗೆ 1930 ರಲ್ಲಿ ಶ್ರೇಷ್ಟ ನೊಬೆಲ್ ಪ್ರಶಸ್ತಿಯನ್ನು ಪಡೆದೇ ಬಿಟ್ಟರು. ಇಂತಹ ಅತ್ಯುನ್ನತ ಪ್ರಶಸ್ತಿಯನ್ನು ಪಡೆದ ಮೊದಲ ಭಾರತೀಯ ವಿಜ್ಞಾನಿಯಾದರು.

**ನಿರುಪಾದಿ, 8ನೇ ತರಗತಿ**
**ಸ.ಹಿ.ಪ್ರಾ.ಶಾಲೆ ಮುದ್ದನಗುಡಿ**



**ಬಸವಲಿಂಗಪ್ಪ**
**2ನೇ ತರಗತಿ**
**ಉಟಕನೂರು**





# ಕೈ ಕೆಸರಾದರೆ ಬಾಯಿ ಮೊಸರು



ಇದು ಒಂದು ಜನಪ್ರಿಯವಾದ ನಾಣ್ಣುಡಿಯಾಗಿದೆ. ಈ ಮಾತು ಪ್ರತಿಯೊಬ್ಬ ಮನುಷ್ಯನಿಗೆ ಪ್ರಾಣಿಗಳಿಗೆ ಎಲ್ಲಾ ಜೀವಿಗಳಿಗೆ ಅನ್ವಯಿಸುತ್ತದೆ. ಯಾಕೆಂದರೆ ಜೀವನದಲ್ಲಿ ಕಷ್ಟ ಪಡಲಾರದೆ ಏನೂ ಸಿಗುವುದಿಲ್ಲ. ಕಳ್ಳತನ ಮೋಸ ವಂಚನೆ ಮಾಡಿ ಬದುಕಿದರೆ ಯಾವತ್ತು ನಮಗೆ ಒಳ್ಳೆಯದಾಗುವುದಿಲ್ಲ. ನಾವು ಕಷ್ಟ ಪಟ್ಟು ದುಡಿದು ತಿನ್ನಬೇಕು. ಅನ್ಯರಿಗೆ ಯಾವತ್ತು ಕೈಚಾಚಬಾರದು. ವಿದ್ಯಾರ್ಥಿಗಳಾದ ನಾವು ಶ್ರಮಪಟ್ಟು ಓದಿದರೆ ನಾವು ಫಸ್ಟ್ ಕ್ಲಾಸ್ ನಲ್ಲಿ ಪಾಸಾಗಬಹುದು. ರೈತರು ಶ್ರಮವಹಿಸಿ ಕೆಲಸ ಮಾಡಿದರೆ ಅವರಿಗೆ ಕೈತುಂಬ ಬೆಳೆ ಸಿಗುತ್ತದೆ. ಇಲ್ಲವಾದರೆ ನಾವು ಸೋಮಾರಿಗಳಾಗಿ ಕುಳಿತರೆ ನಮಗೆ ಏನು ಲಾಭ ಸಿಗುವುದಿಲ್ಲ. ಆದ್ದರಿಂದ ಎಲ್ಲರೂ ತಮ್ಮ ಕೆಲಸಗಳನ್ನು ಪ್ರಾಮಾಣಿಕವಾಗಿ ಮುಗಿಸಬೇಕು ಇಲ್ಲವಾದಲ್ಲಿ ಅವರಿಗೆ ಎಂದಾದರೂ ಒಂದು ದಿನ ತಪ್ಪಿಗೆ ಶಿಕ್ಷೆ ಆಗುತ್ತದೆ. ವಿದ್ಯಾರ್ಥಿಗಳಾದ ನಾವು ನಮ್ಮ ಗುರುಗಳು ಹೇಳುವ ಕಿವಿಮಾತುಗಳನ್ನು ತಪ್ಪದೆ ಕೇಳಬೇಕು, ಇಲ್ಲವಾದರೆ ಮುಂದೆ ನಮಗೆ ಅದರ ದುಷ್ಪಾರಿಣಾಮ ಆಗುತ್ತದೆ.

ನಾನು ನನ್ನ ಗೆಳೆಯ ಗೆಳತಿಯರಿಗೆ ಹೇಳುವುದೆನೆಂದರೆ ನಾವೆಲ್ಲ ತಂದೆ ತಾಯಿಗಳ, ಗುರುಗಳ ಮಾತು ಕೇಳಬೇಕು. ದಿನಾಲು ಓದವುದು, ಬೆರೆಯುವುದು ಮಾಡಬೇಕು. ಜಗಳವಾಡಬಾರದು, ಗಲಾಟೆ ಮಾಡಬಾರದು ಇದರಿಂದ ನಮಗೆ ಒಳ್ಳೆಯದಾಗುತ್ತದೆ. ನಮ್ಮ ಶಾಲೆಗೆ ಕೀರ್ತಿ ಬರುತ್ತದೆ. ನಮ್ಮ ಗುರುಗಳಿಗೆ ಸಂತೋಷವಾಗುತ್ತದೆ. ಅದಕ್ಕೆ ಹಿರಿಯರು ಹೇಳುವ ಮಾತು "ದುಡಿದಷ್ಟಿದೆ ಫಲ – ನಡೆದಷ್ಟಿದೆ ನೆಲ" "ಕೈಕೆಸರಾದರೆ ಬಾಯಿ ಮೊಸರು" ಎಂದು.

**ಶರಣಬಸವ 4ನೇ ತರಗತಿ**
**ಸ.ಹಿ.ಪ್ರಾ.ಶಾಲೆ ಜೀನೂರು.**

# ಹಕ್ಕುಗಳು



ಬದುಕಿಗೆ ಅತ್ಯಗತ್ಯವಾದ ಮೂಲಭೂತ ಅವಶ್ಯಕತೆಗಳನ್ನು ಪಡೆಯಲೇಬೇಕು, ಲಭಿಸಲೇಬೇಕು ಮತ್ತು ಯಾರೂ ಅವನ್ನು ಕಸಿದು ಕೊಳ್ಳದೇ ಅವುಗಳನ್ನು ಅನುಭವಿಸಲೇಬೇಕು ಎಂಬ ಪರಿಕಲ್ಪನೆಯ ಸಾರವೇ "ಹಕ್ಕುಗಳು" ಎನ್ನುತ್ತಾರೆ.

ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ಅವಶ್ಯಕತೆಗಳನ್ನು ಒದಗಿಸಿಕೊಟ್ಟು, ಮಕ್ಕಳು ಅವುಗಳನ್ನು ಅನುಭವಿಸಬೇಕಾದ ಪರಿಸರವನ್ನು ಸೃಷ್ಟಿಸುವುದೇ "ಮಕ್ಕಳ ಹಕ್ಕುಗಳು".

ಮಕ್ಕಳ ಹಕ್ಕುಗಳಲ್ಲಿ ಪ್ರಮುಖವಾಗಿ ೪ ಹಕ್ಕುಗಳನ್ನಾಗಿ ಮಾಡಲಾಗಿದೆ.

1. ಬದುಕುವ ಹಕ್ಕು
2. ರಕ್ಷಣೆಯ ಹಕ್ಕು
3. ವಿಕಾಸ ಹೊಂದುವ ಹಕ್ಕು
4. ಭಾಗವಹಿಸುವ ಹಕ್ಕು

1. ಬದುಕುವ ಹಕ್ಕು: ಗಾಳಿ, ನೀರು, ವಸತಿ, ಆಹಾರ, ಆರೋಗ್ಯ, ಶಿಕ್ಷಣ ಉತ್ತಮ ಪರಿಸರ, ತಂದೆ–ತಾಯಿ, ಕುಟುಂಬ, ಪ್ರೇಮ ವಾತ್ಸಲ್ಯ, ಬೆಳಕು ಇವೆಲ್ಲ ಮಕ್ಕಳ ಬದುಕುವ ಹಕ್ಕಿನಲ್ಲಿ ಬರುತ್ತವೆ
2. ರಕ್ಷಣೆಯ ಹಕ್ಕು: ಮನೆ/ವಸತಿ, ಭದ್ರತೆ, ಸಾಮಾಜಿಕ ಭದ್ರತೆ, ಕೌಟುಂಬಿಕ ಭದ್ರತೆ, ಹಿಂಸೆ, ದೌರ್ಜನ್ಯದಿಂದ ರಕ್ಷಣೆ, ಜಾತೀಯತೆ, ಕೋಮುವಾದದಿಂದ ರಕ್ಷಣೆ, ಲಿಂಗ ತಾರತಮ್ಯ, ಬಾಲಕಾರ್ಮಿಕತೆಯಿಂದ ರಕ್ಷಣೆ, ಬಾಲ್ಯ ವಿವಾಹದಿಂದ ರಕ್ಷಣೆ, ಆರೋಗ್ಯದ ರಕ್ಷಣೆ, ಅನಾಹುತಗಳಿಂದ ರಕ್ಷಣೆ, ಪ್ರಕೃತಿ ವಿಕೋಪಗಳಿಂದ ರಕ್ಷಣೆ, ಗಂಡ–ಹೆಂಡತಿ ಜಗಳದಿಂದ ರಕ್ಷಣೆ.
3. ವಿಕಾಸ ಹೊಂದುವ ಹಕ್ಕು: ಶಿಕ್ಷಣ–ಅಂಗನವಾಡಿ ಶಾಲೆ ಮೂಲಭೂತ ಶಿಕ್ಷಣ 6 ರಿಂದ 14 ತರಗತಿಯವರೆಗೆ ಕಡ್ಡಾಯ ಶಿಕ್ಷಣವನ್ನು ಒಂದು ಮಗು ಪಡೆಯಬೇಕು. ಶಿಕ್ಷಣ ತಾರತಮ್ಯವಿಲ್ಲದೆ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ತೆರೆದು ಕೊಳ್ಳುವುದು, ಪ್ರೋತ್ಸಾಹ, ಪೌಷ್ಟಿಕ ಆಹಾರ, ಕ್ರೀಡೆ–ಆಟ–ಪಾಠ, ಸಂವಹನ, ಉತ್ತಮ ವಾತಾವರಣ, ಮನೋರಂಜನೆ, ಬಿಡುವು.
4. ಭಾಗವಹಿಸುವ ಹಕ್ಕು: ಸಂಘಟನೆ, ಅಭಿಪ್ರಾಯ ಮಂಡನೆ, ಮನೋರಂಜನೆ ಕ್ರೀಡೆ, ಸಾಮಾಜಿಕವಾಗಿ– ಗುರುತಿಸುವುದು, ಮಕ್ಕಳ ಮಾತಿಗೆ ಮನ್ನಣೆ, ಪ್ರೋತ್ಸಾಹ, ನಾಯಕತ್ವ.

**ಮಲ್ಲಮ್ಮ ವಿಮುಕ್ತಿ ಸಿಬ್ಬಂದಿ**





# ಸಂಪತ್ತು

ಸಂಸ್ಥೆ ಜನ್ಮ ತಾಳುವುದು ಒಬ್ಬ ವ್ಯಕ್ತಿಗೋಸ್ಕರ ಅಲ್ಲ. ಇಡಿ ಸಮಾಜಕ್ಕೋಸ್ಕರ, ಸಮಾಜದ ಅವ್ಯವಸ್ಥೆಯ ವಿರುದ್ದ ವ್ಯವಸ್ಥಿತವಾಗಿ, ಆಡಳಿತಾತ್ಮಕ ಸಮಾನತೆ ತರುವುದರ ಸಲುವಾಗಿ, ಆಂತರಿಕವಾಗಿ ಹಾಗೂ ಬಹಿರಂಗವಾಗಿ ಬದಲಾವಣೆಗಾಗಿ, ಇಂತಹ ಸಂಸ್ಥೆಗಳ ಅವಶ್ಯಕತೆ ಇದೆ. ಅದಕ್ಕಾಗಿಯೇ ವಿಮುಕ್ತಿ ಸಂಸ್ಥೆ ಒಂದು ನಿಜವಾದ ಸಂಪತ್ತು ಆಗಿದೆ.

ಎಲ್ಲಾ ಸಂಸ್ಥೆಗಳಿಗಿಂತ ಈ ವಿಮುಕ್ತಿ ಸಂಸ್ಥೆ ಒಂದು ವಿಶೇಷತೆಯುಳ್ಳದಾಗಿದೆ. ಇಲ್ಲಿ ಹೆಸರೆ ಸೂಚಿಸುವಂತೆ ವಿಮುಕ್ತಿ ಎಂದರೆ, ಕೊನೆಯ ಹಂತದಲ್ಲಿ ಮುಕ್ತಿ ದೊರೆಯಿತು, ಜ್ಞಾನ ದೊರೆಯಿತು, ಸಂತೋಷ ತುಂಬಿತು, ಎಂಬೆಲ್ಲಾ ಅರ್ಥಗಳನ್ನು ಕೊಡಬಹುದಾಗಿದೆ. ಅಂದರೆ ಸಮಾಜದಲ್ಲಿ ಅಜ್ಞಾನದಿಂದ ಇದ್ದ ವ್ಯಕ್ತಿಗಳನ್ನು ಜ್ಞಾನದ ಕಡೆಗೆ ತರುವುದೇ ಈ ವಿಮುಕ್ತಿಯ ಸಾಧನೆಯಾಗಿದೆ.

ಸಮಾಜದಲ್ಲಿ ತಿಳಿದವರು ಮತ್ತು ತಿಳಿಯದವರು ಎಂಬ ಎರಡು ವರ್ಗಗಳಿವೆ. ತಿಳಿದವರು ತಿಳಿದವರನ್ನೊ ಆಳುತ್ತಾರೆ. ಅವರಿಗೆ ಅವರೇ ರಾಜರು, ಅಂದರೆ ತಿಳಿಯದವರು ತಿಳಿದವರಿಂದ ಆಳಿಸಿಕೊಂಡು ನಮ್ಮ ಬದುಕೆ ಹೀಗೆ ಎಂದು ತೀರ್ಮಾನಿಸಿರುತ್ತಾರೆ. ಆದರೆ ತಿಳಿದವರು ಮಾತ್ರ ತಿಳಿಯದವರಿಗೆ ಆರ್ಥಿಕ ದೌರ್ಜನ್ಯ, ದೈಹಿಕ ದೌರ್ಜನ್ಯ, ಸಾಮಾಜಿಕ ದೌರ್ಜನ್ಯ, ಆಡಳಿತಾತ್ಮಕ ದೌರ್ಜನ್ಯ ಸೇರಿದಂತೆ ಇನ್ನಿತರರ ಮೇಲೆ ದೌರ್ಜನ್ಯ ಮಾಡುತ್ತಲೇ ಇರುತ್ತಾರೆ.

ಆದರೆ ತಿಳಿಯದವರು ಸಹ ತಿಳಿದುಕೊಂಡು ಸಮಾಜದಲ್ಲಿ ಒಳ್ಳೆಯ ವ್ಯಕ್ತಿಯಾಗಿ ಗೌರವದಿಂದ ಜೀವಿಸುವ ಅವಕಾಶ ಇದೆ, ಎನ್ನುವುದನ್ನು ಅವರಿಗೆ ತಿಳಿಸುವ ಪ್ರಯತ್ನವನ್ನು ಈ ವಿಮುಕ್ತಿ ಸಂಸ್ಥೆ ಮಾಡುತ್ತಿದೆ.

ತಿಳಿಯದವರಿಗೆ ತಿಳಿಸುವ ಪ್ರಯತ್ನ ಹಿಂದಿನಿಂದಲೂ ರಾಜರ ಕಾಲದಿಂದ, ಬ್ರಿಟಿಷರ ಕಾಲದಿಂದ, ನಮ್ಮ ಸರಕಾರಗಳು ಸೇರಿದಂತೆ ಅನೇಕ ಸಂಘ ಸಂಸ್ಥೆಗಳು ಮಾಡುತ್ತಾ ಬಂದಿವೆ. ಆದರೆ ಇದುವರೆಗೆ ಸಮಾನತೆ ಬಂದಿಲ್ಲಾ. ಇದಕ್ಕೆ ಕಾರಣ ಹೆಚ್ಚುತ್ತಿರುವ ಜನಸಂಖ್ಯೆ ಸಮಸ್ಯೆಗಳು, ನೀತಿ ನಿಯಮಗಳು, ಹೊಸ ಹೊಸ ಕಾನೂನುಗಳು, ಪರಿಸ್ಥಿತಿಗೆ ಅನುಗುಣವಾದ ಪರಿಸರವೇ, ಇದುವರೆಗೆ ಆಡಳಿತಾತ್ಮಕ ಸಮಾನತೆಯನ್ನು ತರುವಲ್ಲಿ ವಿಫಲವಾಗಿದೆ. ಎಂದು ಹೇಳ ಬಹುದಾಗಿದೆ.

ಅಂತ ಸಮಾನತೆಗೆ ಎದೆ ಕೊಟ್ಟು ನಿಂತಂತ ಸಂಸ್ಥೆ ಎಂದರೆ ವಿಮುಕ್ತಿ ಸಂಸ್ಥೆ ಎಂದು ಹೇಳಬಹುದು. ಅದಕ್ಕೊಂದೇ ನಮ್ಮ ರಾಯಚೂರು ಜಿಲ್ಲೆಯಲ್ಲಿ ಸಂಸ್ಥೆಗೆ ಮನ್ನಣೆ ಸಿಕ್ಕೆದೆ.

ಅದೇ ರೀತಿಯಾಗಿ ಈ ಸಂಸ್ಥೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳು ಸಿಬ್ಬಂದಿ ಉತ್ಸುಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.


ಈ ಸಂಸ್ಥೆ ಮಾನ್ವಿ ತಾಲೂಕಿಗೆ ಅಷ್ಟೆ ಸಂಪತ್ತು ಆಗಿರದೆ. ಇಡಿ ಜಿಲ್ಲೆ ಮತ್ತು ರಾಜ್ಯಕ್ಕೆ ನಿಜವಾದ ಅವಶ್ಯಕವಾದ ಸಂಪತ್ತು ಆಗಲಿ ಎಂಬುದೇ ನನ್ನ ಆಶಯವಾಗಿದೆ.

**ಬಸವರಾಜ ತಾತಾ , ಸುದ್ಧಿಮೂಲ ವರದಿಗಾರರು**
**ಪೋತ್ನಾಳ್ , 9880014922**


ಸಜ್ಜನರ ಸಂಗ ಹೆಜ್ಜೇನು ಸವಿದಂತೆ,
ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ.
ವೇದ ಸುಳ್ಳಾದರೂ ಗಾದೆ ಸುಳ್ಳಾಗದು,
ಮೂರು ವರ್ಷದ ಬುದ್ದಿ ನೂರು ವರ್ಷದವರೆಗೆ.
ಅಡಿಕೆಗೆ ಹೋದ ಮಾನ ಆನೆ ಕೊಟ್ಟರು ಬಾರದು.
ಮುಂಗೈ ಆಡುವ ತನಕ ಊರೆಲ್ಲಾ ನೆಂಟರು.
ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು.
ತಾಯಿಗಿಂತ ಬಂದುವಿಲ್ಲ ಉಪ್ಪಿಗಿಂತ ರುಚಿಯಿಲ್ಲ.

**ಸೋಮಶೇಖರ 4ನೆ ತರಗತಿ**
**ಸ.ಹಿ.ಪ್ರಾ.ಶಾಲೆ. ಮರಕಂದಿನ್ನಿ**

**ಬಸವರಾಜ,**
**೫ನೇ ತರಗತಿ, ಮಲ್ಕಾಪು**



**ವೀರಭದ್ರ ಶೆಟ್ಟಿ, ೬ನೇ ತರಗತಿ**
**ಸ.ಹಿ.ಪ್ರಾ.ಶಾಲೆ, ಉಟಕನೂರು**





*ಕಾಲವು ಬದಲಾಗುತ್ತಿಲ್ಲ, ಬದಲಾಗುತ್ತಿರುವವರು ನಾವು— ಭರ್ತೃ ಹರಿ*

# ಇಂದೇ ಜನಿಸಿ ಬಾ ಮದರ್ ತೆರೇಸಾ

ಗಲ್ಲಿ ಗಲ್ಲಿಯಲ್ಲಿರುವ ಅನಾಥ ಕೂಸುಗಳ ರಕ್ಷಣೆಗೆಂದು,
ಬೀದಿಯಲ್ಲಿ ಬಿದ್ದಿರುವ ಕುಷ್ಠರೋಗಿಗಳ ಹೊತ್ತು ತಂದು,
ಹಸಿದವರಿಗೆ ಬಳಲಿ ಬೆಂಡಾದವರಿಗೆ ನಗುಮುಖದಿ ಇಂದು
ಸೇವೆ ನೀಡಲು ಇಂದೇ ಜನಿಸಿ ಬಾ ಮದರ್ ತೆರೇಸಾ.

ನಿರ್ಮಲ ಚಿತ್ತದಿ ನಗುನಗುತ್ತಾ,
ಹೂ ನಗೆಯಲಿ ಮಲ್ಲಿಗೆ ಚೆಲ್ಲುತ್ತಾ,
ಬಡ ಜನರ ಸೇವೆಯೇ ನಿಜವಾದ ದೇವರ ಸೇವೆಯೆಂದು ಸಾರುತ್ತಾ,
ಕೊನೆಯುಸಿರು ಉಸಿರಾಡುವಾಗಲೂ ನಿತ್ಯವೂ ಬಡವರ ಉಸಿರಾಗಿರುತ್ತಾ,
ಧ್ರುವ ತಾರೆಯಂತೆ ಮಿನುಗಿ ಇಂದೇ ಜನಿಸಿ ಬಾ ಮದರ್ ತೆರೇಸಾ.



ದೀನ ದಲಿತರ ದಿವ್ಯಜ್ಯೋತಿಯಾಗಿ,ಬಡವರ ಭವ್ಯ ಜ್ಯೋತಿಯಾಗಿ,
ನೋವು ಉಂಡವರಿಗಾಗಿ ಮಿಡಿದ ಮನವು ಕರುಣಾ ರಸವಾಗಿ,
ಮಾನವ ಧರ್ಮದ ನಿಜ ರೂಪವ ವಿಶ್ವಕ್ಕೆ ಎತ್ತಿ ತೋರಿಸುವ ಸಲುವಾಗಿ
ಭುವನ ಜ್ಯೋತಿಯಾಗಿ ಇಂದೇ ಜನಿಸಿ ಬಾ ಮದರ್ ತೆರೇಸಾ.

ಸ್ವಾರ್ಥ ಜನರ ಅಂತರಾಳದಲ್ಲಿ ನಿಸ್ವಾರ್ಥದ ಬೀಜ ಬಿತ್ತಲು,
ಕುಹಕಿಗಳ ಹೃದಯಾಳದಲ್ಲಿ ದಯಾಳುತನದ ಚಿಲುಮೆ ಚಿಮ್ಮಿಸಲು,
ಆಸ್ತಿ ಅಂತಸ್ತಿಗಾಗಿ ಹೊಡೆದಾಡುವವರಲ್ಲಿ ಒಲುಮೆ ಹೊಮ್ಮಿ ಹರಿಸಲು
ಶಾಂತಿ ಸಾಗರದಲ್ಲಿ ತೇಲಿ ಬರುವ ದೇವತೆಯಾಗಿ ಇಂದೇ ಜನಿಸಿ ಬಾ ಮದರ್ ತೆರೇಸಾ.

ನಗು ನಗುತ್ತಾ ಬಾಳಬೇಕಾದ ಕಂದಮ್ಮಗಳು, ಆಸರೆಗಾಗಿ ಅತ್ತು ನರಳಾಡುತ್ತಿರಲು,
ಭವಿಷ್ಯದ ಹಾದಿಯ ಕಗ್ಗತ್ತಲೆಯಲ್ಲಿ ಪರದಾಡುವ ರೋಗಿಗಳ ಆಳಲು,
ಚರಂಡಿಗಳಲ್ಲಿ, ಹಾದಿ ಬೀದಿಗಳಲ್ಲಿ ಆನಾಥ ಧ್ವನಿಗಳು ಮೊರೆಯಿಡುತ್ತಿರಲು
ಸಾಧ್ಯವಾದರೆ ಈ ದೇಶದ ಜಗತ್ತಿಗೋಸ್ಕರ ಇಂದೇ ಜನಿಸಿ ಬಾ ಮದರ್ ತೆರೇಸಾ.

**ಮಮತ ವಿಮುಕ್ತಿ ಸಿಬ್ಬಂದಿ**

## ಸವಿನೆನಪು

ಗಿಳಿ ಇರುವುದು ಪಂಜರದಲ್ಲಿ,
ಪಂಜರ ಇರುವುದು ಮೈಸೂರಿನಲ್ಲಿ,
ಮೈಸೂರು ಇರುವುದು ಕರ್ನಾಟಕದಲ್ಲಿ,
ನಿನ್ನ ನೆನಪು ಇರುವುದು ನನ್ನ ಹೃದಯದಲ್ಲಿ.

## ಗೆಳತನ

ಆಕಾಶಕ್ಕೆ ಏಣಿಯಿಲ್ಲ,
ಸಮುದ್ರಕ್ಕೆ ಸೇತುವೆ ಇಲ್ಲ,
ನನ್ನ ನಿನ್ನ ಸ್ನೇಹಕ್ಕೆ ಕೊನೆಯೇ ಇಲ್ಲ.

## ಹಾರೈಕೆ

ಹಿರಿಯರಿಗೆ ತಲೆ ಬಾಗು,
ವಿದ್ಯೆಗೆ ಶರಣಾಗು,
ಹರುಷದ ಹೊನಲಾಗು,
ಕರಗದ ನಿಧಿಯಾಗು,
ಬಾಡದ ಹೂವಾಗು,
ನೀನು ಎಂದೆಂದಿಗೂ
ಚಿರಋಣಿಯಾಗು.

## ಗುರಿ

**ವಿದ್ಯೆ ಎಂಬ ಸಾಗರದಲ್ಲಿ, ತರಗತಿ ಎಂಬ ದೋಣಿಯಲ್ಲಿ,**
**ಉದಾಸೀನ ಎಂಬ ಬಿರುಗಾಳಿಗೆ ಸಿಲುಕಿದೆ,**
**ಉತ್ತೀರ್ಣ ಎಂಬ ದಡವನ್ನು ಸೇರು.**

ಶ್ರೀಕಾಂತ ಉದ್ಬಾಳ್

ಹಾವು ನಡೆಯುವುದು ಸರಸರನೆ,
ಪಕ್ಷಿ ಹಾರುವುದು ಪಟ ಪಟನೆ,
ವಿಮುಕ್ತಿ ಸಂಘದ ಮಕ್ಕಳು
ನಡೆಯುವುದು ಸಿಂಹ ನಡಿಗೆ,

ನಾಶವಾಗುವ ಈ ದೇಹ,
ನಾಶವಾಗುವ ಈ ಸೌಂದರ್ಯ,
ಮೂಸಿಹೋಗುವ ಈ ಸಂಪತ್ತು,

ಈ ಮೂರು ದಿನಗಳಲ್ಲಿ ನೋಡಿದಾಗ
ಸಿಗುವುದೊಂದೇ ವಿಮುಕ್ತಿ ಸಂಘ.
ಅಗಲುವಿಕೆ ಎಂಬ ಐದು ಅಕ್ಷರ ಮರೆತರು,
ವಿಮುಕ್ತಿ ಸಂಘ ಎಂಬ ಐದು ಅಕ್ಷ ಮರೆಯದಿರು ಗೆಳೆಯರೆ.

**ರಾಘವೇಂದ್ರ 9ನೇ ತರಗತಿ**
**ಸ.ಹಿ.ಪ್ರಾ.ಶಾಲೆ. ನಲಗಂದಿನ್ನಿ**

*ಚಿನ್ನದ ಪ್ರತಿ ಎಳೆಯು ಯಾವರೀತಿ ಅಮೂಲ್ಯವೋ, ಹಾಗೆಯೇ ಕಾಲದ ಪ್ರತಿಯೊಂದು ನಿಮಿಷವು ಅಮೂಲ್ಯ.– ಸುಭಾತ.*

# ಕ್ವಿಜ್

1. ಸೆಲ್ಕೋ (SELCO) ನ ವಿಸ್ತೃತ ರೂಪ
2. ಕಾರ್ಗಿಲ್ ಯುದ್ದದ ಸಂದರ್ಬದಲ್ಲಿ ಭಾರತದ ಪ್ರಧಾನಿ ಯಾರು?
3. ಪಂಚಾಯತಿಯಲ್ಲಿ ೫೦ ರಷ್ಟು ಮಹಿಳಾ ಮೀಸಲಾತಿಯನ್ನು ತಂದ ಮೊದಲ ರಾಜ್ಯ ಯಾವುದು?
4. ಮಾನವನ 2ನೆ ಅತೀ ದೊಡ್ಡ ಗ್ರಂಥಿ ಯಾವುದು?
5. ಜಗತ್ತಿನಲ್ಲಿ ಅತೀ ಹೆಚ್ಚು ಜನ ಮಾತನಾಡುವ ಮೂರನೇ ಭಾಷೇ ಯಾವುದು?
6. ಅದಿಶಂಕರಚಾರ್ಯರು ಸ್ಥಾಪಿಸಿದ ನಾಲ್ಕು ಮಠಗಳು ಯಾವುವು?
7. ಹಂಪೆಯ ಪ್ರಾಚೀನ ಹೆಸರು ಯಾವುದು?.
8. ರವೀಂದ್ರನಾಥ ಟಾಗೋರ್ ರವರು ಯಾವಾಗ ಜನಿಸಿದರು?
9. ವಿಧವಾ ಮರುವಿವಾಹ ಕಾಯಿದೆಯನ್ನು ಯಾವಾಗ ಜಾರಿಗೆ ತರಲಾಯಿತು?
10. ವಾಸ್ಕೋಡಿಗಾಮನು ಯಾವ ಇಸ್ವಿಯಲ್ಲಿ ಜಲಮಾರ್ಗದಿಂದ ಭಾರತವನ್ನು ಕಂಡುಹಿಡಿದನು?

**ಉತ್ತರಗಳು: 1) Solar Electric light company, 2) ಅಟಲ್ ಬಿಹಾರಿ ವಾಜಪೇಯಿ, 3)ಬಿಹಾರ್ ರಾಜ್ಯ. 4) ಮೆದುಜಿರಕ ಗ್ರಂಥಿ, 5) ಇಂಗ್ಲೀಷ್ ಬಾಷೆ 6) ಶ್ರೀಂಗೇರಿ, ದ್ವಾರಕ, ಗೋವರ್ಧನ, ಜೋರ್ತಿಮಠ, 7) ಕಿಸ್ಕಿಂದಾ, 8) 1861, 9) 1856, 10)1498**

ಅಮರೇಶ್
ವಿಮುಕ್ತಿ ಸಿಬ್ಬಂದಿ

## ಚುಟುಕುಗಳು

ಆಗಿನ ಕಾಲದ ಹುಡುಗಿಯರ ಜಡೆ ಹಾವಿನ ಹೆಡೆ,
ಈಗಿನ ಕಾಲದ ಹುಡುಗಿಯರ ಜಡೆ ನಾಯಿ ಕೊಡೆ.
ತಿಂದೆನೊಂದು ಮುದ್ದೆ,
ಬಂದೇ ಬಿಟ್ಟಿತು ನಿದ್ದೆ.
ನಮ್ಮೂರ ಗುಡಿಯ ಪೂಜಾರಿ,
ಅವನ ಜುಟ್ಟು ಇಲಿಮರಿ.
ಮಸಾಲೆ ದೋಸೆ, ತಿನ್ನಲು ಆಸೆ,
ಅಮ್ಮ ಮಾಡಿದಿರೆ ಬಲು ನಿರಾಸೆ.

**ಸಂಗ್ರಹ ಶ್ವೇತಾ೭ನೇ ತರಗತಿ**
**ಸ.ಹಿ.ಪ್ರಾ ಶಾಲೆ ತಡಕಲ್**

# ಜೀವನವೆಂದರೆ.......

| | | |
|---|---|---|
| ಜೀವನ ಒಂದು ಸಾಧನೆ | : | ಸಾಧಿಸು |
| ಜೀವನ ಒಂದು ಕೊಡುಗೆ | : | ಸ್ವೀಕರಿಸು |
| ಜೀವನ ಒಂದು ಅದ್ಭುತ | : | ಅನುಭವಿಸು |
| ಜೀವನ ಒಂದು ದುಖ: | : | ಜಯಿಸು |
| ಜೀವನ ಒಂದು ದುರಂತ | : | ಎದುರಿಸು |
| ಜೀವನ ಒಂದು ಕರ್ತವ್ಯ | : | ನಿರ್ವಹಿಸು |
| ಜೀವನ ಒಂದು ಆಟ | : | ಆಡು |
| ಜೀವನ ಒಂದು ರಹಸ್ಯ | : | ಭೇದಿಸು |
| ಜೀವನ ಒಂದು ಪಯಣ | : | ಪೂರ್ಣಗೊಳಿಸು |
| ಜೀವನ ಒಂದು ಗಾಯನ | : | ಹಾಡು |
| ಜೀವನ ಒಂದು ವಾಗ್ದಾನ | : | ನೆರವೇರಿಸು |
| ಜೀವನ ಒಂದು ಪ್ರೀತಿ | : | ಆಸ್ವಾದಿಸು |
| ಜೀವನ ಒಂದು ಸೌಂದರ್ಯ | : | ಆರಾಧಿಸು |
| ಜೀವನ ಒಂದು ಚೇತನ | : | ಸಿದ್ದಿಸಿಕೋ |
| ಜೀವನ ಒಂದು ಹೋರಾಟ | : | ಹೋರಾಡು |
| ಜೀವನ ಒಂದು ಒಗಟು | : | ಬಿಡಿಸು |
| ಜೀವನ ಒಂದು ಗುರಿ | : | ತಲುಪು |

**ಸಂಗ್ರಹ: ಇಂದ್ರಮ್ಮ 6ನೇ ತರಗತಿ**
**ಸ.ಹಿ.ಪ್ರಾ ಶಾಲೆ ಉದ್ಬಾಳ್**

ಜೇನುಹುಳುವೇ, ಜೇನುಹುಳುವೇ, ಏನು ಮಾಡುತ್ತಿರುವೆ,
ಹೂವಿನಿಂದ ಗಂಧ ತಂದು ಜೇನ ಮಾಡುತ್ತಿರುವೆ,
ಜೇನುಹುಳುವೇ ಜೇನುಹುಳುವೇ ಕಚ್ಚಲೇಕೆ ಬರುವೆ,
ಮಕ್ಕಳೆಲ್ಲ ಕೊಕ್ಕೆಯಿಂದ ಚುಚ್ಚುತ್ತಿಹರು ಮಗುವೇ,
ಜೇನುತುಪ್ಪ ನೀಡುವೆ ಹೊಡೆಯ ಬೇಡ ಕಲ್ಲು ಗೂಡಿಗೆ
ಓ ನನ್ನ ಜಾಣ ಮಗುವೇ

**ತಾಯಮ್ಮ 5ನೇ ತರಗತಿ**
**ಸ.ಕಿ.ಪ್ರಾ.ಶಾಲೆ ಈರಲಗಡ್ಡಿ.**



***ಎನಾದರೂ ಮಾಡಿ ಸುಮ್ಮನೆ ಕೂಡಬೇಡಿ, ಕಾಲವನ್ನು ವ್ಯರ್ಥ ಹಾಳು ಮಾಡಬೇಡಿ– ವಾಲ್ಟನ್***




## ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತರು



- ಕುವೆಂಪು–ಶ್ರೀ ರಾಮಾಯಣ ದರ್ಶನಂ—1969
- ಡಾ: ದಾ.ರಾ.ಬೇಂದ್ರೆ ನಾಕುತಂತಿ—1973
- ಡಾ: ಕೆ ಶಿವರಾಮಕಾರಂತ–ಮೂಕಜ್ಜಿಯ ಕನಸುಗಳು—1977
- ಡಾ: ಮಾಸ್ತಿ ವೆಂಕಟೇಶ ಅಯ್ಯಂಗಾರ "ಚಿಕವೀರ ರಾಜೇಂದ್ರ"—1983
- ಡಾ: ವಿ.ಕೃ.ಗೋಕಾಕ್ ಸಮಗ್ರ ಸಾಹಿತ್ಯ—1990
- ಡಾ: ಯು.ಆರ್.ಅನಂತಮೂರ್ತಿ ಸಮಗ್ರ ಸಾಹಿತ್ಯ—1994
- ಗಿರೀಶ್ ಕಾರ್ನಾಡ್ ಸಮಗ್ರ ಸಾಹಿತ್ಯ—1998
- ಡಾ: ಚಂದ್ರಶೇಖರ್ ಕಂಬಾರ್ ಸಮಗ್ರ ಸಾಹಿತ್ಯ—2011

**ಸಂಗ್ರಹ : ರವಿ 5ನೇ ತರಗತಿ**
**ಸ.ಹಿ.ಪ್ರಾ.ಶಾಲೆ ಜೀನೂರು.**

## ಇದು ಸರಿಯೇ?



- ❖ ನಾವು ಕಣ್ಣು ಬಿಡುವ ಮುಂಚೆಯೇ ನಮ್ಮನ್ನು ಕತ್ತಲು ಆವರಿಸಿತ್ತು.
- ❖ ನಾವು ಉಸಿರಾಡುವ ಮುಂಚೆಯೇ ನಮ್ಮ ಉಸಿರಾಟ ಕೆಟ್ಟದಾಗಿತ್ತು.
- ❖ ನಾವು ನಮ್ಮ ಹೊಟ್ಟೆಗೆ ಅಹಾರ ಉಣ್ಣುವ ಮೊದಲೇ ನಮ್ಮ ಆಹಾರ ಕಲುಶಿತ ಮತ್ತು ಅಪೌಷ್ಟಿಕತೆಯಿಂದ ಕೂಡಿತ್ತು.
- ❖ ನಾವು ನಮ್ಮ ಇಚ್ಛೆಗೆ ಅನುಸಾರವಾಗಿ ಬಾಲ್ಯದ ಆಟಗಳನ್ನು ಆಡಿ ಅನುಭವಿಸುವ ಮೊದಲೇ ನಮ್ಮನ್ನು ಬಡತನ ನುಂಗಿಹಾಕಿತ್ತು.
- ❖ ನಾವು ಆಕ್ಷರ ಜ್ಞಾನ ಪಡೆಯುವ ಮೊದಲೇ ನಮ್ಮನ್ನು ವಂಚಿತ ಶಿಕ್ಷಣ ನಮ್ಮಿಂದ ದೂರವಾಗಿತ್ತು.
- ❖ ಮುಂದೆ ನಮ್ಮ ಜೀವನದಲ್ಲಿ ಬದಲಾವಣೆಯ ಸ್ವರೂಪ ಕಾಣದೇ ನಮ್ಮ ಜೀವಂತ ಜೀವನ ಸತ್ತು ಹೋUತು.
- ❖ 'ಭವ್ಯ ಭಾರತದ ಪ್ರಜೆಗಳಾದ ನಾವು ಬೇರೆಯವರ ಹಾಗೆ ಜೀವಿಸಲು ಸಾಧ್ಯವಿಲ್ಲವೇ?' "ಇದು ಸರಿಯೇ?"

**ಶ್ರೀ ಜಯಶೀಲ ವಿಮುಕ್ತಿ ಸಿಬ್ಬಂದಿ**

## ಭೂಷಣ

ದೇಹಕ್ಕೆ ಸೌಂದರ್ಯವೇ ಭೂಷಣ,
ಐಶ್ವರ್ಯನಿಗೆ ಹಣವೇ ಭೂಷಣ,
ಶಾಲೆಗೆ ವಿಧ್ಯಾರ್ಥಿಗಳೇ ಭೂಷಣ,
ದೇವಾಲಯಕ್ಕೆ ದೇವರೆ ಭೂಷಣ,
ಶಿಕ್ಷಕರಿಗೆ ಶಿಸ್ತೆ ಭೂಷಣ,
ಮನೆಗೆ ಮಕ್ಕಳೇ ಭೂಷಣ,
ನಾರಿಗೆ ಸದ್ಗುಣವೇ ಭೂಷಣ,
ಕುಟುಂಬಕ್ಕೆ ಸತಿಪತಿಗಳಿಬ್ಬರು ಭೂಷಣ,
ಸಮಾಜಕ್ಕೆ ಸತ್ಪ್ರಜೆಗಳೇ ಭೂಷಣ,
ಕಟ್ಟಡಕ್ಕೆ ಸುಣ್ಣ ಬಣ್ಣವೇ ಭೂಷಣ,
ಸದ್ಗುಣಗಳು ಸರ್ವರಿಗೂ ಭೂಷಣ.



ಚಕ್ರವರ್ತಿ 4 ನೇ ತರಗತಿ
ಸ. ಕಿ.ಪ್ರಾ ಶಾಲೆ ದೋತರಬಂಡಿ

## ಮುಕ್ತ ಆನಂದ



ತಾಯಿ ಕೊಟ್ಟ ಜನ್ಮವನ್ನು,
ತಂದೆ ಕೊಟ್ಟ ಅನ್ನವನ್ನು,
ವಿಮುಕ್ತಿ ಮೇಳದಲ್ಲಿ ಸಿಕ್ಕ ಆನಂದವನ್ನು
ಎಂದೂ ಮರೆಯಲಾರೆ.
ನಾನು ಬರೆದ ಒಂದು ಕವನ,
ಅದುವೇ ನನಗೆ ಸುಂದರವಾದ ವನ,
ಅದರಲ್ಲಿರುವರು ಬಹಳ ಜನ,
ಕುಣಿಯುತ್ತಿವೆ ಅವರ ಮನ.
ಜೇನಿನ ಸವಿ ಚೆಂದ, ಮೂಡಣ ರವಿ ಚೆಂದ,
ದುರ್ಗದ ಗವಿ ಚೆಂದ, ಕನ್ನಡ ಕವಿ ಚೆಂದ,
ಚೆಂದ ಚೆಂದ ಕನ್ನಡನಾದು ಬಲು ಚೆಂದ.
ನನ್ನ ತಮ್ಮ ಗೋಪಿ,
ಅವನ ಗೆಳೆಯ ಪಾಪಿ,
ಗೋಪಿ ಪಾಪಿ ಸೇರಿಕೊಂಡು ಮಾಡಿದ ರೊಂದು ಪೀಪಿ.
ನನ್ನ ಕೊರಳಲ್ಲಿ ಇರುವದು ಮುತ್ತಿನ ಹಾರ,
ನನಗೆ ರಜೆ ಸಿಗುವುದು ಭಾನುವಾರ,
ಆಟದಲ್ಲಿ ಫಸ್ಟ್ ಬಂದರೆ ಹೂವಿನ ಹಾರ.

ಉಮಾ.ಎಸ್. ಹೀರೆಮಠ ತಡಕಲ್

## ಕಸವೋ ಅನ್ನವೋ ?

ಈ ಬಾಳು ಒಂದು ಬರಡು ಭೂಮಿಯಂತೆ,
ದೇವರು ಇಲ್ಲಿ ಸಿಹಿ ಬೀಜಗಳನ್ನು ಬಿತ್ತುತ್ತಾನೆ,
ಅದರಲ್ಲಿ ಕೆಲವರು ಸಿಹಿ ಬೆಳೆಯಾಗಿ ಬೆಳೆಯುತ್ತಾರೆ.
ಇನ್ನೂ ಕೆಲವರು ಕಸವಾಗಿ ಬೆಳೆಯುತ್ತಾರೆ,
ಸಿಹಿ ಬೀಜಗಳು ಮಾನವರಿಗೆ
ಹಸಿವು ನೀಗಿಸುವ ಅಮೃತವಾಗುತ್ತದೆಯಂತೆ,
ಆದರೆ ಕಸ ಬೀಜಗಳು
ದನಕರುಗಳಿಗೆ ಹಸಿವು ನೀಗಿಸುವ ಹುಲ್ಲಾಗುತ್ತದೆಯಂತೆ,
ಕಸಕ್ಕೂ ಮತ್ತು ಅಮೃತಕ್ಕೂ ಇರುವ ವ್ಯತ್ಯಾಸ ಇಷ್ಟೆ,
ಯೋಚಿಸಬೇಕು ನಾವು ತಿನ್ನುವ ಅನ್ನ, ತುಳಿದಾಡಿದ ಕಸವೋ?
ಅಥವಾ ಅಮೃತವೆಂದು ಸವಿಯುವ ಅನ್ನವೋ?

**ಗೀತಾ ಪಾಟೇಲ್ ವಿಮುಕ್ತಿ ಸಿಬ್ಬಂದಿ**


## ನಾವು ಯಾರಿಂದ ಏನು ಕಲಿಯಬೇಕು



ನೀರಿನಿಂದ–ಸಮಾನತೆ,
ಹೂಗಳಿಂದ–ರಸಿಕತೆ,
ಹಾಲಿನಿಂದ–ಸ್ನೇಹ,
ಸೂರ್ಯನಿಂದ–ಸಮಯಪಾಲನೆ,
ಮಕ್ಕಳಿಂದ–ನಿರ್ಮಲ ಮನಸ್ಸು,
ಕಾಗೆಯಿಂದ–ಹಂಚಿ ತಿನ್ನುವ ಗುಣ,
ಪಕ್ಷಿಯಿಂದ–ಶಿಸ್ತು ಒಗ್ಗಟ್ಟು, ಸಿಂಹದಿಂದ–ಕಾರ್ಯ.

ಸಂಗ್ರಹ : ದೇವರಾಜ 4ನೇ ತರಗತಿ
ಸ.ಕಿ.ಪ್ರಾ.ಶಾಲೆ ಬೆಳವಾಟ

***ಅನುಭವದ ಒಂದು ಮುಳ್ಳು ಒಂದು ಜೀವಮಾನದ ಎಚ್ಚರಿಕೆಗಿಂತ ಮಿಗಿಲಾದುದು. –ಲೋವೆಲ್***







ಮನೆಯೇ ಮೊದಲ ಪಾಠ ಶಾಲೆ, ಪ್ರಾಣಿಗಳನ್ನು ಹಿಂಸಿಸದೆ ಪ್ರೀತಿಸು, ಇಂದಿನ ಮಕ್ಕಳೆ ಇಂದಿನ ಪ್ರಜೆಗಳು, ಹಸಿದು ಬಂದವರಿಗೆ ಅನ್ನ ಹಾಕು, ಅತಿಥಿಯನ್ನು ಸತ್ಕರಿಸಿದರೆ ದೇವರನ್ನು ಸತ್ಕರಿಸಿದಂತೆ, ಗುರುಹಿರಿಯರನ್ನು ಗೌರವದಿಂದ ಕಾಣು, ನೇತ್ರದಾನ ಮಹಾದಾನ, ಅತೀ ಆಸೆ ಗತಿಗೇಡು, ಕನಸು ನನಸಾಗಲು ಪ್ರಯತ್ನ ಬೇಕು, ಕಷ್ಟ ಪಟ್ಟರೆ ಇಷ್ಟ ಸಿದ್ದ, ಕಾಯಕವೇ ಕೈಲಾಸ, ಕೈ ಕೆಸರಾದರೆ ಬಾಯಿ ಮೊಸರು, ವಿಧ್ಯೆ ಕಲಿತ ನಾರಿ ಸುಖ ಸಂಸಾರಕ್ಕೆ ದಾರಿ, ಆಪತ್ತಿನಲ್ಲಿರುವವರಿಗೆ ಸಹಾಯ ಮಾಡುವವರೆ ನಿಜವಾದ ಗೆಳೆಯರು, ಊರಿಗೆ ಅರಸನಾದರೆ ತಾಯಿಗೆ ಮಗ, ಆಳಾಗಿ ದುಡಿ ಅರಸನಾಗಿ ಉಣ್ಣು, ಉಪಾಯ ಬಲ್ಲವನಿಗೆ ಅಪಾಯವಿಲ್ಲ. ಇಂದಿನ ಸೋಲು ನಾಳಿನ ಗೆಲುವು. ಕಾಡು ಬೆಳೆಸಿ ನಾಡು ಉಳಿಸಿ, ಮಾತು ಕೊಟ್ಟು ಮೋಸ ಮಾಡದಿರು.


ಮನ್ನೂರು, 5ನೆ ತರಗತಿ
ಸ.ಹಿ.ಪ್ರಾ.ಶಾಲೆ. ಮರಕಂದಿನ್ನಿ

## ಅಮೃತ ಬಿಂದುಗಳು

- ಅವಲಂಬಿಸದೇ ಇರುವುದು ಮನುಷ್ಯನ ನಿಜವಾದ ಲಕ್ಷಣ–ಟಾಗೋರ್
- ಅಮರತ್ವವನ್ನು ಸಾದಿಸಲು ನಿರಾಡಂಬರ ಸೇವೆ ಮಾಡಿ–ಶಿಸಿಕೋ
- ಬಹಿರಂಗವಾಗಿ ಗಳಿಸಿದ ಯಶಸ್ವಿಗಿಂತಲೂ ಅಂತರಂಗದ ಶುದ್ದ ಜೀವನವೇ ಮುಖ್ಯ–ಜಸ್ಟರ್ ಟನ್.
- ಅಂತರಂಗ ಶುದ್ದಿಯ ಪರಿಣಾಮ ಬಹಿರಂಗ ವರ್ಚಸ್ಸಿನ ಮೇಲೆ ಸಾಕಸಾಗುವುದು.
- ಅದೃಷ್ಟವು ಗಾಜಿನ ಹೊಳಪಿನಂತೆ, ಹೊಳಪು ಹೆಚ್ಚಿದಂತೆ ಬೇಗ ಒಡೆಯುತ್ತದೆ.–ಸೈರಸ್.
- ಅದೃಷ್ಟ ಬೆರಳನ್ನು ತೋರಿಸುವಾಗ ಹಸ್ತವನ್ನೆ ಹಿಡಿಯಬೇಕು– ಸ್ವೀಡನ್ ಗಾದೆ.
- ಅದೃಷ್ಟ ಎಂಬುದು ಒಂದು ಸಂತೆಯಂತೆ ಸ್ವಲ್ಪ ಸಮಯದಲ್ಲಿಯೋ ಅದರ ಬೆಲೆ ಬಿದ್ದು ಹೋಗುವುದು– ಬೇಕನ್.
- ಅದೃಷ್ಟವನ್ನು ನಂಬಿಕೊಂಡಿರಬೇಡಿ ನಿಮ್ಮ ಪ್ರಾಮಾಣಿಕತೆಯನ್ನು ನಂಬಿಕೊಳ್ಳಿ–ಸೈರಸ್.
- ಅನುಭವವೇ ಮಾನವನ ನಿಜವಾದ ಪಾಠಶಾಲೆ–ಟರ್ಕಿ

ಶರಣಪ್ಪ, 7ನೇ ತರಗತಿ
ಸ.ಹಿ.ಪ್ರಾ.ಶಾಲೆ ಮುದ್ದನಗುಡಿ.

## ಪ್ರೀತಿ ನಿನ್ನೊಂದಿಗೆ ನಮ್ಮ ಬಾಳಿರಲಿ



ಪ್ರೀತಿ ಎನ್ನುವುದು ಮಾನವ ಜೀವನದಲ್ಲಿ ಅತೀ ಮುಖ್ಯ ಪಾತ್ರ ವಹಿಸುತ್ತದೆ. ಪ್ರೀತಿಯ ಅರ್ಥ ವಿಶಾಲವಾದುದು. ಹಾಗೂ ದೊಡ್ಡದು. ಪ್ರೀತಿಗೆ ಬೀಡಿಸಲಾಗದ ಬಂಧನವಿದೆ. ಪ್ರೀತಿಯನ್ನು ಗಂಡು –ಹೆಣ್ಣುಗಳ ಮೋಹಕ್ಕೆ ಹೋಲಿಸುವವರೆ ಹೆಚ್ಚು. ಆದರೆ ಮೋಹದಲ್ಲಿ ಮಾತುಕಥೆ ಇದೆ. ಸ್ವಾರ್ಥವಿದೆ ಮತ್ತು ಆಸೆ ಇದೆ. ದ್ವೇಶದಿಂದ ಸಾಧಿಸಲಾಗದನ್ನು ಪ್ರೀತಿಯಿಂದ ಸಾಧಿಸಬಹುದು. ಪ್ರೀತಿಯಲ್ಲಿ ಔಷಧಿಯ ಗುಣವಿರುವುದರಿಂದ ಅದು ಆರೋಗ್ಯವನ್ನು ವೃದ್ದಿಸುತ್ತದೆ. ಪ್ರೀತಿ ಜೀವನದ ಪರ್ಯಾಂತ ವ್ಯಕ್ತಿಯ ಅವಿಭಾಜ್ಯ ಅಂಗವಾಗಿ ಮಾನವನ ಜೀವನದ ಸಫಲತೆ ನಿರ್ವಹಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅಂತಹ ಪ್ರೀತಿಯಲ್ಲಿ ನಾನಾ ತರಹ ವಿಧಗಳಿವೆ.

**ಸಂಗ್ರಹ: ಪೂರ್ಣಿಮಾ 7 ನೇ ತರಗತಿ**
**ಸ.ಹಿ.ಪ್ರಾ ಶಾಲೆ ಪೋತ್ನಾಳ**

## ಫಲ

ಓದುವ ದಾಹ ಇಲ್ಲದ ವಿಧ್ಯಾರ್ಥಿಗಳಿದ್ದರೇನು ಫಲವಯ್ಯ,
ನಾಡಿನ ಬಗ್ಗೆ ನಿಷ್ಠೆ ಇಲ್ಲದ ಪ್ರಜೆಗಳಿದ್ದರೇನು ಫಲವಯ್ಯ,
ಗಂಡನ ಮೇಲೆ ಪ್ರೀತಿ ಇಲ್ಲದ ಹೆಂಡತಿ ಇದ್ದರೇನು ಫಲವಯ್ಯ,
ಬಡವನಿಗೆ ಸಹಾಯ ಮಾಡದ ಶ್ರೀಮಂತನಿದ್ದರೇನು ಫಲವಯ್ಯ,
ಮಕ್ಕಳ ಮೇಲೆ ಪ್ರೀತಿ ಇಲ್ಲದ ತಂದೆ ತಾಯಿಗಳಿದ್ದರೇನು ಫಲವಯ್ಯ,
ತಂದೆ ತಾಯಿ ಮೇಲೆ ಪ್ರೀತಿ ಇಲ್ಲದ ಮಕ್ಕಳಿದ್ದರೇನು ಫಲವಯ್ಯ,
ರೋಗಿಯನ್ನು ಸರಿಯಾಗಿ ನೋಡದ ವೈಧ್ಯರಿದ್ದರೇನು ಫಲವಯ್ಯ,
ದೇಶವನ್ನು ಕೊಳ್ಳೆ ಹೊಡೆಯುವ ಪ್ರಜೆಗಳಿದ್ದರೇನು ಫಲವಯ್ಯ.

ದೇವರಾಯಪ್ಪ
ಶಿಕ್ಷಕರು ದೋತರಬಂಡಿ.

## ಬ್ಯಾಡ

ಓ ನನ್ನ ಯುವ ಮಿತ್ರ ಹೋಗಬೇಡ ದುಶ್ಚಟಗಳ ಹತ್ತಿರ
ಎಲ್ಲೆಂದರಲ್ಲಿ ಕೈಮಾಡಿ ಕರೆಯುತ್ತವೆ ನನ್ನ ಸ್ವೀಕರಿಸು ಬಾ ರಸಿಕ ಎನ್ನುತ್ತವೆ.
ಮಂಗನಂಗ ಮನಸ್ಸಿಗೆ ಬಂದಾಂಗ ಮಾಡಬ್ಯಾಡ
ಬೀಡಿ ಹಚ್ಚಿ ಬಾಯಿಗೆ ಚುಚ್ಚಿ ಹೊಗೆ ಬಿಡಬ್ಯಾಡ
ಹುಚ್ಚನಾಯಿ ತಿರುಗಿದ ಹಾಗೆ ಬೀದಿ ಬೀದಿ ಅಲೆಯಬ್ಯಾಡ
ಮಟ್ಕಾ ಇಸ್ಪೀಟ್ ಜೂಜು ಆಡಬ್ಯಾಡ
ಕಿಡಿಗೇಡಿಗಳ ಸಂಗ ಮಾಡಬ್ಯಾಡ
ವಯಸ್ಸಿದೆಯಂತ ಹೆಂಗಸರ ಸಹವಾಸ ಮಾಡಬ್ಯಾಡ
ಗುಟ್ಕಾ ತಿಂದು ಕ್ಯಾನ್ಸರ್ ಬಂದು ಗೊಟಕ್ ಅಗಬ್ಯಾಡ
ಬಾಟಲಿ ಕುಡಿದು ಗಟಾರ ಸಂದಿಗೆ ಬಿಳಬ್ಯಾಡ
ಇದು ಬರೀಗಾಳಿ ಮಾತಲ್ಲಿ ಮಿತ್ರ
ನಿನ್ನ ಜೀವನದ ಪ್ರತಿಕ್ಷಣಕ್ಷಣಕ್ಕೂ ನೀನು ಬದಲಾಗುವ ರೀತಿ



**ಬಸವರಾಜ್ 6 ನೇ ತರಗತಿ**
**ಸ.ಹಿ.ಪ್ರಾ ಶಾಲೆ ಉಟಕನೂರು**



***ಎಲ್ಲವರನ್ನೂ ಪ್ರೀತಿಸು, ಆದರೆ ಕೆಲವರನ್ನು ನಂಬು–ಅನಾಮಿಕ***



# ಸಪ್ತಪದಿಗಳು


1. ಸ್ವೀಕರಿಸುವ ಮನಸ್ಸಿದ್ದರೆ– ಸದ್ಗುಣಗಳನ್ನು ಸ್ವೀಕರಿಸು.
2. ಈಜುವ ಮನಸ್ಸಿದ್ದರೆ– ಜ್ಞಾನ ಸಾಗರವನ್ನು ಈಜು.
3. ನಡೆಯುವ ಮನಸ್ಸಿದ್ದರೆ_ಸನ್ಮಾರ್ಗದಲ್ಲಿ ನಡೆ.
4. ಮಾತನಾಡುವ ಮನಸ್ಸಿದ್ದರೆ– ಸತ್ಯವನ್ನು ಮಾತನಾಡು.
5. ದೊರೆಕಿಸುವ ಮನಸ್ಸಿದ್ದರೆ– ಜಯವನ್ನು ದೊರಕಿಸು.
6. ನುಂಗಲು ಇಚ್ಛೆ ಇದ್ದರೆ– ಸಿಟ್ಟನ್ನು ನುಂಗು.
7. ತ್ಯಜಿಸುವ ಮನಸಿದ್ದರೆ– ದುರ್ಗಣಗಳನ್ನು ತ್ಯಜಿಸು.

ಸಂಗ್ರಹ : ವೆಂಕಟೇಶ 5ನೇ ತರಗತಿ
ಸ.ಕಿ.ಪ್ರಾ.ಶಾಲೆ ಬೆಳವಾಟ



ಬೆಕ್ಕು ಬಂತು ಮೆಂವ್ ಮೆಂವ್,
ನಾಯಿ ಬಂತು ಬೌಂವ್ ಬೌಂವ್,
ಕುದುರೆ ಬಂತು ಹೈ ಹೈ,
ಶಾಲೆಗೆ ಹೋಗುವೆ ಬೈ ಬೈ.
ಗಾಡಿ ಬಂತು ಚೆಕ್ ಬುಕ್,
ಕೋಳಿ ಬಂತು ಕೊಕ್ ಕೊಕ್,
ಪಾಟಿ ಚೀಲ ತಾ ತಾ,
ಶಾಲೆಗೆ ಹೋಗುವೆ ಟಾಟ ಟಾಟ.
ಅಪ್ಪನ ಕಿಸೆಯಲ್ಲಿ ಹಣ ಹಣ,
ಅಮ್ಮನ ಕೈಯಲಿ ಝುಣ ಝುಣ,
ಹಲಿಗೆ ಒಡಿಯುವೆ ಖಣ ಖಣ,
ನಾ ಶಾಲೆಗೆ ಹೋದರೆ ಮನೆ ಬಣ ಬಣ.

ಸಂಗ್ರಹ: ರೋಜಾಬಿ 7ನೇ ತರಗತಿ
ಸ.ಹಿ.ಪ್ರಾ.ಶಾಲೆ ಮುದ್ದನಗುಡಿ.



ವಾಣಿಶ್ರೀ, ಮಲ್ಲಾಪುರ



# ನಿಸರ್ಗ

ನವಿಲಿನ ಗರಿ ಚೆಂದ,
ಅದರ ಕಣ್ಣು ಚೆಂದ,
ಅದರ ನಾಟ್ಯ ಚೆಂದ,
ಆದರೆ ನಮ್ಮ ಭಾಷೆ ಕನ್ನಡ ಅಂದವೇ ಅಂದ.
ಆನೆಯ ಬಣ್ಣ ಚೆಂದ,
ಆನೆಯ ಕಿವಿ ಚೆಂದ,
ಆದರ ಕಾಲು ಚೆಂದ,
ಆದರೆ ಈ ನಮ್ಮ ಶಾಲೆಯೂ ಚೆಂದವೇ ಚೆಂದ.
ಅಡಿಕೆ ತೋಟವೆ ಸ್ವರ್ಗಕ್ಕಿಂತಲೂ ಚೆಂದ,
ಹೀಗೆಂದು ಪದ ಹಾಡಿ ಕವಿ ಕುಳಿತುಕೊಂಡ,
ಒಡನೆಯೇ ಒಳನುಗ್ಗಿದವು ಕಾಡ ಹಂದಿ,
ಓಡಿ ಹೋದರು ತೋಟದೊಳಗಿದ್ದ ಮಂದಿ.
ಪ್ರತಿಯೊಂದು ಹಾದಿಯಲ್ಲಿ ಉಂಟು ಹಾವು,
ಕಚ್ಚಿದರೆ ನಮಗೆ ತಪ್ಪುವುದಿಲ್ಲ ಸಾವು,
ಆದರೆ ನಾವು ಬಿಡಬಾರದೆಂದಿಗೂ ಹಾದಿ,
ಹಾದಿ ಬಿಟ್ಟರೆ ನಮ್ಮ ಜೀವನ ಸಾಮಾಧಿ.

ಮೊಹಿದ್ದೀನ್ 6ನೇ ತರಗತಿ
ಸ.ಹಿ.ಪ್ರಾ.ಶಾಲೆ. ಮರಕಂದಿನ್ನಿ.



ಬೆಳೆಯು ಬೆಳೆಯುತ್ತಿರಲಿ, ಮಳೆಯು ಬರುತ್ತಿರಲಿ, ನೀರು ಹರಿಯುತ್ತಿರಲಿ, ನನ್ನ ನಿನ್ನ ಸ್ನೇಹ.
ಸ್ನೇಹವೆಂಬ ಮುತ್ತಿನಹಾರ, ಪೋಣಿಸಲು ಬೇಕು ಭಾವನೆಯ ದಾರ, ಅದುವೇ ಸ್ನೇಹದ ಸಾಕ್ಷಾತ್ಕಾರ.
ಭೂಮಿಗೆ ಹಸಿರು ಚೆಂದ, ಆಕಾಶಕ್ಕೆ ಚಂದಿರ ಚೆಂದ, ಆದರೆ ನನಗೆ ನೀನು ಚೆಂದ
ಮಲ್ಲಿಗೆಯಂತ ಮನಸ್ಸಿರಲಿ, ಸಂಪಿಗೆ ಯಂತೆ ಸವಿಯಿರಲಿ, ಗುಲಾಬಿಯಂತೆ ಗುಣವಿರಲಿ, ನನ್ನ ನಿನ್ನ ಸ್ನೇಹ ಅಮರವಾಗಿರಲಿ.

**ಲಕ್ಷ್ಮೀ 6ನೇ ತರಗತಿ**
**ಸ.ಹಿ.ಪ್ರಾ.ಶಾಲೆ ಮುದ್ದನಗುಡಿ.**

**ಚುಟುಕುಗಳು**

ತನ್ನಂತೆ ಪರರನ್ನು ಬಗೆದಾತ ಶರಣ,
ವಿದ್ಯೆಯನ್ನು ಕಲಿತರೆ ಅದುವೇ ಆಭರಣ,
ಬೆನ್ನು ಹತ್ತಿಯೆ ಇದೆ ನೋಡು ಮರಣ,
ಇದ್ದಾಗ ನೀನಾಗು ಎಲ್ಲರಿಗೂ ಕಿರಣ.
ವಿಶ್ವ ಪುಸ್ತಕ ದಿನ, ಓದಿ ತುಂಬಿಕೊಳ್ಳುವ ಮನ,
ಇನ್ನು ಬರಲಿ ಬರುತಿರಲಿ ಕುವೆಂಪು ಪು,ತಿ.ನ
ಮಾಸ್ತಿಯಂತಹ ಸಾಹಿತಿಗಳು ಎನ್ನುತಿದೆ ಮನ.

**ಸೊನಮ್ಮ 8ನೇ ತರಗತಿ, ಸ.ಕಿ.ಪ್ರಾ ತಡಕಲ್**

*ಸಮಯವನ್ನು ಭಗಂತ ಮಾಡಿದ ಆದರೆ ಆತುರ ಮನುಷ್ಯನ ಸೃಷ್ಟಿ– ಐರಿಸ್*





## ಮೊಬೈಲ್ ಗಾದೆಗಳು



ಹಳೆ ಮೊಬೈಲ್ ಹೋದ ಆರು ನಿಮಿಷದಲ್ಲಿ ಹೊಸ ಮೊಬೈಲ್ ಬಂತು.

ಗರ್ಲ್ ಫ್ರೆಂಡ್ ಬಾಯ್ ಫ್ರೆಂಡ್ ಜಗಳ ಮೊಬೈಲ್ ಖರೀದಿಸುವ ತನಕ

ಮೊಬೈಲ್ ಇರಬೇಕು ಇಲ್ಲಾ ಗರ್ಲ್ ಫ್ರೆಂಡ್ ಇರಬೇಕು ಎರಡು ಇರವದವ ಯಾಕೀರಬೇಕು.

ಗರ್ಲ್ ಫ್ರೆಂಡ್ ಮಿಸ್ ಕಾಲ್ ನಿಂದ ತಪ್ಪಿಸಿಕೊಂಡರೆ ವರ್ಷ ಪೂರ್ತಿ ಕರೆನ್ಸಿ.

ಅನ್ಯಾಯ ಮಾಡುವವರಿಗೆ ಕೊರಳು ತುಂಬಾ ಮೊಬೈಲ್.


ಮಾತು ಮನೆ ಕೆಡೆಸಿತು, ಮೊಬೈಲ್ ತಲೆಕೆಡಿಸಿತು.

ಕರೆನ್ಸಿ ಖಾಲಿಯಾದಮೇಲೆ ಮೊಬೈಲ್ ಗೆ ಪಾಸ್ ವಾರ್ಡ್ ಹಾಕಿಸಿದ ಹಾಗೆ.

ಮೊಬೈಲ್ ನಿಂದ ಹೊರಟ ತರಂಗಗಳು ಮೊಬೈಲ್ ಖರೀದಿಸುವವನನ್ನು ಸಾಯಿಸುತ್ತದೆ.

**ಚಾರ್ಲಿ ವಿಮುಕ್ತಿ ಸಿಬ್ಬಂದಿ**


## ಶರೀರದ ಮಂತ್ರಿಮಂಡಲ




ಹೃದಯ–ರಾಷ್ಟ್ರಪತಿ, ಮೆದುಳು–ಪ್ರಧಾನ ಮಂತ್ರಿ, ಬುದ್ಧಿ–ಶಿಕ್ಷಣ ಮಂತ್ರಿ, ನಾಲಿಗೆ–ಆರೋಗ್ಯ ಮಂತ್ರಿ, ಕಿವಿ–ಪಾಲನಾ ಮಂತ್ರಿ, ತ್ವಚೆ–ಸಂರಕ್ಷಣಾ ಮಂತ್ರಿ, ಜಠರ–ಆಹಾರ ಮಂತ್ರಿ, ಎಲುಬು–ಕಟ್ಟಡ ಮಂತ್ರಿ, ಕೂದಲು–ಅರಣ್ಯ ಮಂತ್ರಿ, ಕಣ್ಣು–ನಿರೀಕ್ಷಣ ಮಂತ್ರಿ, ಕಾಲು–ಸಾರಿಗೆ ಮಂತ್ರಿ, ಹಲ್ಲು–ಸಂಪನ್ಮೂಲ ಮಂತ್ರಿ.

**ಸಂಗ್ರಹ : ಬಸವರಾಜ 6ನೇ ತರಗತಿ**
**ಸ.ಕಿ.ಪ್ರಾ.ಶಾಲೆ ಬೆಳವಾಟ**

ಅಮ್ಮನು ಮಾಡಿದ ದುಂಡನೆ ಚಕ್ಕುಲಿ, ಅಪ್ಪನು ಸುತ್ತಿದ ಕಡ್ಡಿ ಚಕ್ಕುಲಿ, ಕೆಂಪಗೆ ಸುಟ್ಟಿದ ಗರಿ ಗರಿ ಚಕ್ಕುಲಿ. ಬಿಸಿ ಬಿಸಿ ಚಕ್ಕುಲಿ ತಿನ್ನಲು ಚಕ್ಕುಲಿ, ರಜೆಯಲಿ ಬೇಕು ತಿನ್ನಲು ಚಕ್ಕುಲಿ, ರೈಲು ಪಯಣಕ್ಕೆ ಬೇಕಿದು ಚಕ್ಕುಲಿ, ಬೇಸರ ಕಳೆಯುವ ಗರಿಗರಿ ಚಕ್ಕುಲಿ, ಗೆಳೆಯರ ಕೂಡಿ ತಿನ್ನುವ ಚಕ್ಕುಲಿ.



**ರಂಗನಾಥ, 3ನೇ ಸ.ಹಿ.ಪ್ರಾ.ಶಾಲೆ ಮುದ್ದನಗುಡಿ.**



ಶಿವನು ಕೊಡುವನು ವರವನ್ನು,
ಲಕ್ಷ್ಮೀ ಕೊಡುವಳು ಹಣವನ್ನು,
ಸರಸ್ವತಿ ಕೊಡುವಳು ವಿದ್ಯೆಯನ್ನು,
ತಂದೆ–ತಾಯಿ ಮಾಡುವರು ಆಶೀರ್ವಾದವನ್ನು,
ನಾನು ತೆರೆಯುವನು ನನ್ನ ಹುಡುಗಿಗೆ ಹೃದಯದ ಬಾಗಿಲನ್ನು.



ಮಲ್ಲಿಗೆ ಇರುವುದು ಗಿಡದಲ್ಲಿ,
ಸುವಾಸನೆ ಇರುವುದು ಹೂವಿನಲ್ಲಿ,
ಅದು ಅಂದವಾಗಿ ಕಾಣುವುದು,
ನನ್ನ ಪ್ರೀತಿಯ ಹುಡುಗಿಯ ಜಡೆಯಲ್ಲಿ.

**ರಮೇಶ್ 5ನೇ ತರಗತಿ, ಸ.ಹಿ.ಪ್ರಾ.ಶಾಲೆ ಮುದ್ದನಗುಡಿ.**

## ಒಗಟುಗಳು

- ಇಬ್ಬರು ದುಡಿಯುತ್ತಾರೆ ಇಬ್ಬರು ನೋಡುತ್ತಾರೆ 32 ಜನ ತಿನ್ನುತ್ತಾರೆ
- ಹಗ್ಗ ಹಾಸಿದೆ ಎಮ್ಮೆ ಮಲಗಿದೆ.
- ಕಲ್ಲರಳಿ ಹೂವಾಗಿ ಎಲ್ಲರಿಗೂ ಬೇಕಾಗಿ ಮಲ್ಲಿಕಾರ್ಜುನನ ಶಿಬಿರಕ್ಕೆ ಬೆಳಕಾಗಿ.
- ಹತ್ತು ಅಂದರ ಹತ್ತೋದಿಲ್ಲ ಇಪ್ಪತ್ತು ಅಂದರೆ ಹತ್ತುತ್ತೆ
- ಹಟ್ಟದ ಮೇಲೆ ಪುಟ್ಟ ಲಕ್ಷ್ಮೀ
- ವಜ್ರದಂತ ವಂಶದವನು ಚಿದ್ರ ಚಿದ್ರ ಆದಾ
- ಚಿಕ್ಕ ಮಗು ಮನಿ ಕಾಯುತ್ತೆ
- ಒಂದು ಮಗು ಆಳುತ್ತಾ ಇರುತ್ತೆ ಎತ್ತಿಕೊಂಡರೆ ಸುಮ್ಮನಾಗುತ್ತೆ
- ತಲೆ ಇಲ್ಲದ ಅಜ್ಜಿ ಊರಿನಿಂದ ಊರಿಗೆ ಪ್ರಯಾಣ ಮಾಡುತ್ತಾಳೆ

**ಉತ್ತರಗಳು: ೧) ಕೈ ಕಣ್ಣು ಹಲ್ಲು, ೨)ಕುಂಬಳಕಾಯಿ, ೩)ಸುಣ್ಣ, ೪)ತುಟಿ, ೫) ಕುಂಕುಮ, ೬)ರಾಜೀವಗಾಂದಿ, ೭) ಬೀಗದಕ್ಕೈ ೮)ಫೋನ್, ೯)ತಲೆದಿಂಬು,**

**ಬಸಪ್ಪ 7ನೇ ತರಗತಿ**
**ಸ.ಹಿ.ಪ್ರಾ.ಶಾಲೆ ಮುದ್ದನಗುಡಿ.**

## ಸರಕಾರಿ ಶಾಲೆ




**ಈಗಿನ ಸರಕಾರಿ ಶಾಲೆಗಳಿಗೆ ೮ ಮೂಲಿ**
**ನಾಲ್ಕರಲ್ಲಿ ಮಕ್ಕಳಾಡುತ್ತಿದ್ದವು ಗೋಲಿ**
**ಎರಡರಲ್ಲಿ ಶಿಕ್ಷಕರ ಕಾಗದ ಪತ್ರದ ಹಮಾಲಿ**
**ಇನ್ನೊಂದರಲ್ಲಿ ಮಾಡುತ್ತಿದ್ದರು ಜಾಲಿ**
**ಒಂದರಲ್ಲಿ ಮಾಸ್ತರ ಒಡೆಯುತ್ತಿದ್ದ ಜೋಲಿ**
**ಸರಕಾರಿ ಯೋಜನೆಗಳ ಸರಮಾಲೆ**
**ದಿನಬೆಳಗಾದರೆ ಅಧ್ಯಕ್ಷರ ಕಾಟ**
**ಮುಖ್ಯೋಪಾಧ್ಯಾಯರ ಮೀಟಿಂಗ್ ನ ಓಟ**
**ಮಕ್ಕಳ ಪಾಠ ಶಿವನೇ ಬಲ್ಲ**
**ಶಾಲೆಯ ಪರಿಸ್ಥಿತಿ ದೇವರೇ ಬಲ್ಲ.**

**ವಿನಯ್ ಕುಮಾರ್ 9ನೇ ತರಗತಿ**
**ದೋತರಬಂಡಿ**




***ಬೇರೆಯವರ ದೋಷಗಳ ಬಗ್ಗೆ ಹೆಚ್ಚು ಗಮನ ಕೊಡಬಾರದು– ವಾಂಗ್ಟನ್***



# “ಶಿಕ್ಷಣದಲ್ಲಿ ಸೂಕ್ಷ್ಮ ಯೋಜನೆ”





ಶಿಕ್ಷಣ ಕ್ಷೇತ್ರದಲ್ಲಿ ಯೋಜನೆಗಳನ್ನು ವಿವಿಧ ಹಂತಗಳಲ್ಲಿ ಕೈಗೊಳ್ಳಲಾಗುತ್ತದೆ. ನಮ್ಮ ದೇಶದಲ್ಲಿ ಈ ಹಂತಗಳನ್ನು ರಾಷ್ಟ್ರ-ರಾಜ್ಯ-ಜಿಲ್ಲೆ ಮತ್ತು ಗ್ರಾಮದ ಹಂತಗಳಲ್ಲಿ ಕೈಗೊಳ್ಳಬಹುದಾಗಿದೆ. ಸಂಪನ್ಮೂಲಗಳ ಕ್ರೋಢೀಕರಣ ಹಾಗೂ ಹಂಚಿಕೆಗೆ ಸಂಬಂಧಿಸಿದ ಪ್ರಮುಖ ನಿರ್ಧಾರಗಳು ರಾಷ್ಟ್ರೀಯ ಮಟ್ಟದಲ್ಲಿ ಕೈಗೊಳ್ಳಲಾದರೆ, ರಾಜ್ಯ ಮಟ್ಟದಲ್ಲಿ ಯೋಜನೆಯ ಗುರಿಯು ಸಂಪನ್ಮೂಲಗಳ ಕ್ರೋಢೀಕರಣ ಮತ್ತು ವರ್ಗಾವಣೆಯಾಗಿರುತ್ತದೆ. ಆದರೆ ರಾಜ್ಯ ಮಟ್ಟದಲ್ಲಿ ಯೋಜನೆಯನ್ನು ರೂಪಿಸುವಾಗ ಕೇಂದ್ರ ಸರಕಾರವು ವಿಧಿಸುವ ಅಳತೆಗೋಲುಗಳು ಗಮನದಲ್ಲಿಟ್ಟುಕೊಳ್ಳಬೇಕಿದೆ. ಜಿಲ್ಲಾ ಮಟ್ಟದಲ್ಲಿ ಯೋಜನೆಯು ಮುಖ್ಯವಾಗಿ ಸಂಪನ್ಮೂಲಗಳ ಕ್ರೋಢೀಕರಣಕ್ಕಿಂತ ಸಂಪನ್ಮೂಲಗಳ ವರ್ಗೀಕರಣದ ಮೇಲೆ ಕೇಂದ್ರಿಕೃತವಾಗಿರುತ್ತದೆ.

ಇವೆಲ್ಲಕ್ಕಿಂತ ಮುಖ್ಯವಾಗಿ ಗ್ರಾಮ ಮಟ್ಟದಲ್ಲಿ ಕೈಗೊಳ್ಳಲಾಗುವ “ಸೂಕ್ಷ್ಮ ಯೋಜನೆ” ಯನ್ನು ಗಮನಿಸಬೇಕಾಗುತ್ತದೆ. ಆದ್ದರಿಂದ ಸೂಕ್ಷ್ಮ ಯೋಜನೆಯು ಗ್ರಾಮ ಮಟ್ಟದಲ್ಲಿ ಯೋಜನೆಯ ಅನುಷ್ಠಾನದ ತಂತ್ರಗಳ ಮೇಲೆ ಗಮನವನ್ನು ಕೇಂದ್ರಿಕರಿಸುವುದು. ಅಂದರೆ ಅದರ ಆಧ್ಯ ಗಮನವು ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಹಂಚಿಕೆಯಲ್ಲ. ಬದಲಾಗಿ ಹಂಚಿಕೆಯಾದ ಸಂಪನ್ಮೂಲಗಳ ಬಳಸಿಕೊಂಡು ಅನುಷ್ಠಾನದ ಯೋಗ್ಯವಾದ ಯೋಜನೆಯನ್ನು ಸ್ಥಳೀಯ ಅಗತ್ಯಗಳಿಗನುಗುಣವಾಗಿ ರೂಪಿಸಬಹುದು. ಆದ್ದರಿಂದ ಶಿಕ್ಷಣದಲ್ಲಿ ಸೂಕ್ಷ್ಮಯೋಜನೆ ಎಂದರೆ-ರಾಷ್ಟ್ರ-ರಾಜ್ಯ ಮಟ್ಟದಲ್ಲಿ ನಿರ್ಧರಿಸಲಾದ ಅಳತೆಗೋಲುಗಳು ಹಾಗೂ ನಿರ್ಬಂಧಗಳಿಗೊಳಪಟ್ಟು ಅತ್ಯಂತ ಚಿಕ್ಕ ಗ್ರಾಮ ಹಂತದಲ್ಲಿ ರೂಪಿಸುವ ಯೋಜನೆಯಾಗಿದೆ. ಈ ಯೋಜನೆಯನ್ನು ರೂಪಿಸುವವರು ಗ್ರಾಮ ಸಮುದಾಯದವರು ಆಗಿರಬೇಕಾಗುತ್ತದೆ.

ಈ “ಸೂಕ್ಷ್ಮ ಯೋಜನೆಯು ಯಶಸ್ಸಾಗಲು ಕೆಲವು ಉದ್ದೇಶಗಳನ್ನು ಗ್ರಾಮ ಸಮುದಾಯದವರು ಮತ್ತು ಶಾಲಾ ಹಂತದಲ್ಲಿ ಕಾರ್ಯನಿರ್ವಹಿಸುವವರ ಜವಾಬ್ದಾರಿಯನ್ನು ಹೊಂದಿದಾಗ ಮಾತ್ರ.

- ಗ್ರಾಮದ ಸಮಸ್ಯೆಗಳನ್ನು ಗಮನದಲ್ಲಿರಿಸುವ ಜನರ ಸಹಭಾಗಿತ್ವದ ಮೂಲಕ ಯೋಜನೆಯ ರೂಪಿಸುವಂತೆ ಸ್ಥಳೀಯ ಸಮುದಾಯದವನ್ನು ಜಾಗೃತಗೊಳಿಸುವುದು.
- ಅರ್ಹ ವಯಸ್ಸಿನ ಎಲ್ಲ ಮಕ್ಕಳನ್ನು ಶಾಲೆಗಳಲ್ಲಿ ದಾಖಲಾಗುವಂತೆ ನೋಡಿಕೊಳ್ಳುವುದು.
- ಶಾಲೆ ಮತ್ತು ಸಮುದಾಯದ ಮಧ್ಯೆ ಉತ್ತಮ ಸಂವಾದ ಮತ್ತು ಸಂಬಂಧವನ್ನು ರೂಪಿಸುವ ಮೂಲಕ ಶಾಲೆ ಮತ್ತು ಶಿಕ್ಷಕರಿಗೆ ನಿರಂತರ ಬೆಂಬಲ ನೀಡುವ “ಶ್ಶೆ” ವ್ಯವಸ್ಥೆ ರೂಪಿಸುವುದು.

ಲಭ್ಯವಿರುವ, ಕೊರತೆಯಲ್ಲಿರುವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಉತ್ತಮ ಶಿಕ್ಷಣ ನೀಡಬೇಕೆಂದು ಬಯಸುವ ಪ್ರತಿಯೊಬ್ಬ ಶಿಕ್ಷಕರೂ, ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗಬೇಕೆಂದು ಅಪೇಕ್ಷಿಸುವ ಸಮುದಾಯದ ಸದಸ್ಯರೂ ಸೂಕ್ಷ್ಮ ಯೋಜನೆಯನ್ನು ಕೈಗೊಳ್ಳಬಹುದಾಗಿದೆ.

ಸೂಕ್ಷ್ಮ ಯೋಜನೆಯ ಕಾರ್ಯವು ಹಲವು ಹಂತಗಳಲ್ಲಿ ಹೊಂದಿದಾಗ ಈ ಯೋಜನೆಯ ಗೆಲುವಿಗೆ ಪೂರಕವಾಗಬಹುದು ಎಂಬುದು ನನ್ನ ಭಾವನೆ.

- ಹಳ್ಳಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು.
- ಗ್ರಾಮದ ನಕ್ಷೆಯ ತಯಾರಿಸುವುದು.
- ಗ್ರಾಮ ನಕ್ಷೆ ಬಗೆಗಿನ ಚರ್ಚೆ ಮತ್ತು ಸಂವಾದ.
- ಗೃಹ ಸಮೀಕ್ಷೆ.
- ಗೃಹ ಸಮೀಕ್ಷೆಯಿಂದ ದೊರೆತ ಮಾಹಿತಿಯ ಕ್ರೋಢೀರಣ.
- ಗ್ರಾಮ ಶಿಕ್ಷಣ ವಹಿಯ ತಯಾರಿಸಿಕೊಂಡು ಅದರ ಬಗ್ಗೆ ಚರ್ಚೆ ಮಾಡುವುದು.
- ಶಾಲಾ ಸಂಬಂಧಿತ ಅಂಶಗಳ ಬಗ್ಗೆ ವಿಶ್ಲೇಷಣೆ.
- ಗ್ರಾಮ ಶಿಕ್ಷಣ ಯೋಜನೆಯ ತಯಾರಿಕೆ.

ಕೊನೆಯ ಮಾತು

ಈ ರೀತಿಯಾಗಿ ಸೂಕ್ಷ್ಮ ಯೋಜನೆಯು ಗ್ರಾಮ ಸಮುದಾಯದಲ್ಲಿ ಶಿಕ್ಷಣದ ಮಹತ್ವ ಮನಗಾಣಿಸುವುದಲ್ಲದೇ ತಮ್ಮ ಗ್ರಾಮದಲ್ಲಿ ಶಿಕ್ಷಣದ ಸಮಸ್ಯೆಗಳನ್ನು ತಾವೇ ಗುರುತಿಸಿ, ಅದಕ್ಕೆ ಪರಿಹಾರೋಪಾಯಗಳನ್ನು ತಾವೇ ಕಂಡುಕೊಳ್ಳಲು ಸಮುದಾಯವನ್ನು ಪ್ರೋತ್ಸಾಹಿಸುತ್ತದೆ. ಆದ್ದರಿಂದ ಇದನ್ನು ಪ್ರತಿಯೊಂದು ಗ್ರಾಮದಲ್ಲಿ ತಮ್ಮ ಹಂತದಲ್ಲೇ ಕೈಗೊಳ್ಳಬಹುದು. ಸಮುದಾಯದಲ್ಲಿ ಸೂಕ್ತ ತಿಳುವಳಿಕೆ ಇಲ್ಲದಿದ್ದರೆ ಶಿಕ್ಷಕರೇ ಮುಂದುವರೆದು, ಸೂಕ್ಷ್ಮ ಯೋಜನೆಯನ್ನು ಕೈಗೊಳ್ಳಬೇಕು. ಇದರಲ್ಲಿ ಸಮುದಾಯವನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಮತ್ತು ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯನ್ನು ತೊಡಗಿಸಿಕೊಂಡು ಭಾಗಿಯಾಗುವಂತೆ ಪ್ರೋತ್ಸಾಹಿಸಬೇಕು. ಈ ರೀತಿಯಾಗಿ ಸೂಕ್ಷ್ಮ ಯೋಜನೆಯು ಗ್ರಾಮದಲ್ಲಿಂದು ಶಿಕ್ಷಣ ಸಮಸ್ಯೆಗಳಿಗೆ ಸಮುದಾಯವೇ ಪರಿಹಾರ ಕಂಡುಕೊಳ್ಳುವ ಮೂಲಕ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಭಾಗಿಯಾಗುವಂತೆ ಮಾಡಿರಿ. ಲಭ್ಯವಿರುವ ಸಂಪನ್ಮೂಲಗಳ ಮೂಲಕ ಶೈಕ್ಷಣಿಕ ಬೆಳವಣಿಗೆಗೆ ಪರಿಣಾಮಕಾರಿಯಾಗಿ ಹೇಗೆ ಪಡೆಯಬೇಕು ಎಂದು ಚಿಂತಿಸುವ ಪ್ರತಿಯೊಬ್ಬರೂ ಸೂಕ್ಷ್ಮ ಯೋಜನೆ ಕೈಗೊಳ್ಳಬಹುದು. ನಿಮ್ಮೂರಿನಲ್ಲಿ ನೀವೇ ಪ್ರಯತ್ನಿಸಿ ನೋಡಿರಿ

**ಆದೇಶ ಟಿ., ಸಹ.ಶಿಕ್ಷಕರು**
**ಸ.ಹಿ.ಪ್ರಾ.ಶಾಲೆ.ಉಟಕನೂರು**

## ಜೋಕ್ಸ್



| | |
|---|---|
| ಹೆಂಡತಿ:- | ಒಂದು ವೇಳೆ ನಾನು ಸತ್ತು ಹೋದರೆ ಮತ್ತೆ ಮದುವೆಯಾಗುತ್ತೀರಾ! |
| ಗಂಡ:- | ನಿನ್ನ ಪ್ರಶ್ನೆಗೆ ಉತ್ತರಿಸೋದು ತುಂಬಾ ಕಷ್ಟ |
| ಹೆಂಡತಿ:- | ಯಾಕೆ? |
| ಗಂಡ:- | ಆಗ್ತೀನಿ ಅಂದ್ರೆ ನಿನಗೆ ಕೋಪ ಬರುತ್ತೆ, ಆಗೊಲ್ಲ ಎಂದರೆ ಅವಳಿಗೆ ಕೋಪ ಬರುತ್ತೆ. |

**ಸಂಗ್ರಹ ಮಲ್ಲಮ್ಮ 6 ನೇ ತರಗತಿ, ತಡಕ್ಕಲ್**



*ಉತ್ತಮ ಶಿಕ್ಷಣ ಉದ್ದೇಶವೆನೆಂದರೆ, ಕೇವಲ ಕಲಿಸುವುದಲ್ಲ ಕಲಿಯುವ ಆಸೆಯನ್ನು ಹುಟ್ಟಿಸುವುದು- ಗಾಂಧಿಜೀ*



# ಕವನಗಳು

ಅಜ್ಜಿಗೆ ಹಲ್ಲಿನ ಆಸೆ,
ಕೋಳಿಗೆ ಕಾಳಿನ ಆಸೆ,
ನನಗೆ ವಿಮುಕ್ತಿ ಸಂಸ್ಥೆ
ನೋಡುವ ಆಸೆ.

ಹೂ ಸಿಗುವುದು ತೋಟದಲ್ಲಿ,
ಮುತ್ತು ಸಿಗುವುದು ಸಾಗರದಲ್ಲಿ,
ಸಂತೋಷ ಸಿಗುವುದು ವಿಮುಕ್ತಿ
ಸಂಸ್ಥೆಯ ಕಾರ್ಯಕ್ರಮದಲ್ಲಿ.

ಯಶಸ್ಸು ಯಾರೊಬ್ಬರ ಸ್ವತ್ತಲ್ಲ,
ಅದು ಸಾಧಕನಿಗೆ ದೂರವಿಲ್ಲ.
ಬೇಡಿ ಪಡೆದ ಪ್ರೇಮ ಚೆಂದ,
ಬೇಡದೇ ಪಡೆದ
ಪ್ರೇಮ ಇನ್ನು ಚೆಂದ

ವಿಮುಕ್ತಿ ಸಂಸ್ಥೆ ಚೆಂದ,
ಸಂಸ್ಥೆಯ ಸಿಬ್ಬಂದಿಗಳು ಚೆಂದ,
ಸಂಸ್ಥೆಯ ಮಕ್ಕಳ ಕ್ಲಬ್‌ಗಳು
ಬಲು ಚೆಂದ.
ಅಕ್ಕರೆಯ ನಗು ಚೆಂದ,
ಸಕ್ಕರೆಯ ಸಿಹಿ ಚೆಂದ,
ನಕ್ಕು ನಗಿಸುವ
ನಿಮ್ಮ ಮುಖ
ಇನ್ನು ಚೆಂದ

ಸಂಗ್ರಹ : ಗಂಗಮ್ಮ , 7 ನೇ ತರಗತಿ,
ಸ.ಹಿ.ಪ್ರಾ ಶಾಲೆ ಪೋತ್ನಾಳ



ಅಂಬರೀಶ
೬ನೇ ತರಗತಿ
ಉದ್ಬಾಳ

## ಕವನಗಳು

ದೂರ ಇದ್ದಾಗ ನೆನೆಸು,
ಹತ್ತಿರ ಬಂದಾಗ ಮಾತನಾಡಿಸು,
ಮನೆಗೆ ಬಂದಾಗ ಸತ್ಕರಿಸು.

ಕಲ್ಲು ಒಂದು ಪ್ರಕೃತಿ,
ಕೆತ್ತಿದರೆ ಆಕೃತಿ,
ಪೂಜಿಸಿದರೆ ಸಂಸ್ಕೃತಿ.

ಪೇಪರ್ ಓದುವವರಲ್ಲಿ ಸುದ್ದಿ ಜಾಸ್ತಿ,
ಲಾಯರ್ ಅದವರಲ್ಲಿ ಬುದ್ಧಿ ಜಾಸ್ತಿ,
ಕಾಲಿ ಕುಳಿತವರಲ್ಲಿ ಹರಟೆ ಜಾಸ್ತಿ.

ಜೀವನ ಒಂದು ನಾಟಕ
ಮನಸ್ಸು ಅದರ ಜಾತಕ,
ವಿಧಿಯೇ ಅದರ ನಿರ್ಮಾಪಕ,
ನಿನಗೆ ಇರಲಿ ನನ್ನ ಜ್ಞಾಪಕ.


ವಿಧ್ಯಾರ್ಥಿ ವೀಣೆ ಇದ್ದಂತೆ,
ಶಿಕ್ಷಕ ವಾಧ್ಯಗಾರನಿದ್ದಂತೆ,
ಶಾಲೆ ದೇವಾಲಯುವಿದ್ದಂತೆ,
ಕೀರ್ತಿ ನಾದವಿದ್ದಂತೆ.

ಕವಿ ಇಲ್ಲದೆ ಕವಿತೆ ಇಲ್ಲ,
ಶಿಲ್ಪ ಇಲ್ಲದೆ ಶಿಲೆ ಇಲ್ಲ,
ಪ್ರೀತಿ ಪ್ರೇಮವಿಲ್ಲದ ಜೀವನವಿಲ್ಲ.

ಒಂದು ಹೂವನ್ನು ನೋಡಬೇಡ,
ನೋಡಿದರೆ ಮುಟ್ಟಬೇಡ,
ಮುಟ್ಟಿದರೆ ನೋಯಿಸಬೇಡ,
ನೋಯಿಸಿದರೆ ಎಂದೆಂದೂ ಕೈ ಬಿಡಬೇಡ.

ಹಿಂದೆ ನನ್ನಾಕೆ ಮಾಡುತ್ತಿದ್ದಳು ಬಿಳಿ ಜೋಳದ ರೊಟ್ಟಿ,
ಅದನ್ನು ತಿಂದು ನಾನಾಗಿದ್ದೆ ಜಗಜಟ್ಟಿ,
ಇಂದು ನನ್ನಾಕೆ ಮಾಡುತ್ತಾಳೆ,
ಇಡ್ಲಿ ಸಂಬಾರ್ ವಡ,
ಅದನ್ನು ತಿಂದು ನಾನಾಗಿನಿ ಕಾಲಿ ರಬ್ಬಲ್ ಕೊಡ.

ಹುಸೇನ ಬಾಷ 5ನೇ ತರಗತಿ
ಸ.ಕಿ.ಪ್ರಾ ಶಾಲೆ ದೋತರಬಂಡಿ




ಮೋಹನ್, ೬ನೇ ತರಗತಿ
ಸ.ಹಿ.ಪ್ರಾ.ಶಾಲೆ, ಮಲ್ಲಾಪುರ



ಪ್ರಕಾಶ್, ೬ನೇ ತರಗತಿ
ಉದ್ಬಾಳ



ಲಿಂಗನಗೌಡ, ೬ನೇ ತರಗತಿ
ಉದ್ಬಾಳ



ಬಸವಲಿಂಗಪ್ಪ, ೭ನೇ ಸ.ಹಿ.ಪ್ರಾ.ಶಾಲೆ
ಉಟಕನೂರು



***ನೀನು ಸತ್ತೊಡನೆ ಜನ ನಿನ್ನನ್ನು ಮರೆಯಬಾರದೆನ್ನುವುದಾದರೆ ಓದು ಬಹುದಾದುದನ್ನು ಬರೆ ಇಲ್ಲವೇ ಬರೆಯಬಹುದಾದುದನ್ನು ಮಾಡು– ಫ್ರಾಂಕ್ಲಿನ್***

# ಅಂಚೆ ಕಛೇರಿಗೆ ಹೋಗಿರಿ, ಆಧಾರ್ ಕಾರ್ಡ್ ಪಡೆಯಿರಿ


**ಎಂ. ವೀರೇಶ್ ವಿ. ಮೊರಾಸ್**
**ನಿರ್ದೇಶಕರು**
**ಎಸ್.ಎಂ.ಎಸ್.ಎಸ್.ಎಸ್., ಚೈತನ್ಯ**




***ಇದು ಆಧಾರ್ ಸಮಾಚಾರ್! ಭಾರತದ ಪ್ರತಿಯೊಬ್ಬರೂ ವಿಶಿಷ್ಟ ಗುರುತಿನ ಸಂಖ್ಯೆ 'ಆಧಾರ್ ಕಾರ್ಡ್' ಪಡೆಯಬಹುದಾದ ಸಮಾಚಾರ್! ಮಕ್ಕಳನ್ನು ಶಾಲೆಗೆ ಸೇರಿಸುವುದರಿಂದ ಹಿಡಿದು ಮಾಸಾಶನ ಪಡೆಯುವ ತನಕ ನಾನಾ ಕಾರ್ಯಗಳಿಗೆ ಈ ಸಂಖ್ಯೆ ಅತೀ ಮುಖ್ಯ. ಜೀವನ ಪರ್ಯಂತ ಉಪಯೋಗಕ್ಕೆ ಬರುವ 'ಆಧಾರ್ ಕಾರ್ಡ್' ಎಂದರೆ ಏನು ? ಪಡೆಯುವುದು ಹೇಗೆ? ಮಾಹಿತಿ ಇಲ್ಲಿದೆ.***

## 'ಆಧಾರ್ ಕಾರ್ಡ್' ಎಂದರೇನು ?

ಕೇಂದ್ರ ಸರ್ಕಾರ ಭಾರತದಲ್ಲಿ ವಾಸಿಸುವ ಪ್ರತಿಯೊಬ್ಬರಿಗೂ 12 ಅಂಕಿಗಳ ವಿಶಿಷ್ಟ ಗುರುತಿನ ಸಂಖ್ಯೆಯನ್ನು ನೀಡುವ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಈ ವಿಶಿಷ್ಟ ಗುರುತಿನ ಸಂಖ್ಯೆಯೇ (ಯುನಿಕ್ ಐಡಿ ಕಾರ್ಡ್) 'ಆಧಾರ್ ಕಾರ್ಡ್'.

- ಪ್ರತಿಯೊಬ್ಬರಿಗೂ 12 ಅಂಕಿಗಳ ವಿಶಿಷ್ಟ ಗುರುತಿನ ಸಂಖ್ಯೆ
- ಭಾರತದಲ್ಲಿ ವಾಸಿಸುವ ನವಜಾತ ಶಿಶುವಿನಿಂದ ಹಿಡಿದು ಎಲ್ಲರನ್ನು ಈ ಸಂಖ್ಯೆಯ ಮೂಲಕ ವಿಶೇಷವಾಗಿ ಗುರುತಿಸಲು ಸಾಧ್ಯ.
- ಪ್ರತಿಯೊಬ್ಬರಿಗೂ ತಮ್ಮದೇ ಆದ ಸಂಖ್ಯೆ ಇರಲು ಸಾಧ್ಯ
- ಒಂದು ಸಲ ಈ ಸಂಖ್ಯೆ ಪಡೆದ ಮೇಲೆ, ಇದು ಜೀವನ ಪೂರ್ತಿ ಊರ್ಜಿತ ಹಾಗೂ ಪ್ರಯೋಜನಕಾರಿ.

## ಪ್ರಯೋಜನಗಳೇನು?

- ಗುರುತಿನ ಚೀಟಿಯಾಗಿ ಬಳಕೆ
- ಬಡವರು ಹಾಗೂ ದೀನದಲಿತರಿಗೆ ಬ್ಯಾಂಕ್ ಖಾತೆ ತೆರೆಯಲು ಸುಲಭ ಸಾಧ್ಯ.
- ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ನೀಡುವ ವಿವಿಧ ಸೌಲಭ್ಯಗಳನ್ನು ಪಡೆಯಲು ಉಪಯುಕ್ತ.
- ಮಕ್ಕಳನ್ನು ಶಾಲೆಗೆ ಸೇರಿಸಲು, ವೃದ್ಧಾಪ್ಯ ವೇತನ, ಉದ್ಯೋಗ, ಬ್ಯಾಂಕ್ ಖಾತೆ ತೆರೆಯಲು, ಮಾಸಾಶಾನ ಪಡೆಯಲು ನೆರವಾಗಲಿದೆ.
- ಉದ್ಯೋಗ ಖಾತರಿ ಯೋಜನೆ ಫಲಾನುಭವಿಗಳ ಕೂಲಿಯನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಲು, ಚಾಲನಾ ಪರವಾನಿಗೆ, ಪಡಿತರ ಚೀಟಿ, ಗ್ಯಾಸ್ ಕನೆಕ್ಷನ್ ಹಾಗೂ ಇನ್ನೂ ಹಲವಾರು ಸೌಲಭ್ಯಗಳನ್ನು ಪಡೆಯಲು ಸಹಕಾರಿ.
- ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆಯಲು ವಿವಿಧ ದಾಖಲೆಗಳನ್ನು ನೀಡುವುದನ್ನು ಇದು ತಪ್ಪಿಸುತ್ತದೆ. ಇದೊಂದೇ ದಾಖಲೆ ಸಾಕು.
- ಭಾರತದ ಯಾವುದೇ ಭಾಗಕ್ಕೂ ಯಾವುದೇ ಅಡೆತಡೆಗಳಿಲ್ಲದೆ, ನಿರ್ಭೀತಿಯಿಂದ ಸಂಚರಿಸಬಹುದು.

## ನೋಂದಣಿ ಎಲ್ಲೆಲ್ಲಿ ?

- ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಎಲ್ಲಾ ಪ್ರಧಾನ ಅಂಚೆ ಕಛೇರಿಗಳಲ್ಲಿ
- ಪ್ರಸ್ತುತ ರಾಯಚೂರು ಪ್ರಧಾನ ಅಂಚೆ ಕಛೇರಿಯಲ್ಲಿ ನೋಂದಣಿ ಕಾರ್ಯ ಆರಂಭವಾಗಿದೆ. ಜನವರಿ 1 ರ ನಂತರ ರಾಯಚೂರು ಅಂಚೆ ಕಛೇರಿಯಲ್ಲಿ ಪ್ರಾರಂಭಿಸಲಾಗುವುದು.
- ರಾಯಚೂರು ಜಿಲ್ಲೆಯ ಸಿಂಧನೂರು, ಮಾನ್ವಿ, ಲಿಂಗಸಗೂರು, ದೇವದುರ್ಗ, ಜಿಲ್ಲಾ ಹಾಗು ತಾಲೂರು ಮಟ್ಟದ ಪ್ರಧಾನ ಅಂಚೆ ಕಛೇರಿಗಳಲ್ಲಿ ಇನ್ನು ಕೆಲವೇ ದಿನಗಳಲ್ಲಿ ಆರಂಭ. ಉಳಿದ ಜಿಲ್ಲೆಗಳಲ್ಲಿ ಶೀಘ್ರವೇ ಆರಂಭವಾಗಲಿದೆ.


## ನೋಂದಣಿ ಹೇಗೆ ?

1. ನೋಂದಣಿ ಮಾಡುವ ಅಂಚೆ ಕಛೇರಿಗೆ ಅರ್ಜಿದಾರರು ವೈಯುಕ್ತಿಕವಾಗಿ ಭೇಟಿ ಮಾಡಬೇಕು.
2. ವಿಳಾಸ, ಗುರುತು ಹಾಗೂ ಜನನ ಪ್ರಮಾಣ ದಾಖಲೆಗಳ ಮೂಲ ಪ್ರತಿಗಳೊಂದಿಗೆ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಿ ಸಂಬಂಧ ಪಟ್ಟ ಅರ್ಜಿಯನ್ನು ಭರ್ತಿ ಮಾಡಿ ನೀಡಬೇಕು. ಅರ್ಜಿ ಅಂಚೆ ಕಛೇರಿಯಲ್ಲಿಯೇ ಸಿಗುತ್ತದೆ.
3. ಸಿಬ್ಬಂದಿ ನಿಮ್ಮ ವಿವರಗಳನ್ನು ಕಂಪ್ಯೂಟರಿನಲ್ಲಿ ದಾಖಲಿಸುತ್ತಾರೆ
4. ಅರ್ಜಿದಾರರು ಆ ವಿವರಗಳನ್ನು ಸರಿಯಾಗಿ ಇದೆಯೇ ಎಂದು ಪರಿಶೀಲಿಸಿ ಅನುಮೋದಿಸುತ್ತಾರೆ.
5. ವೆಬ್ ಕ್ಯಾಮರ ಮೂಲಕ ಅರ್ಜಿದಾರರ ಭಾವಚಿತ್ರ ತೆಗೆಯಲಾಗುತ್ತದೆ.
6. ಅಕ್ಷಿ ಪಟಲ (ಕಣ್ಣು)ವನ್ನು ಸ್ಕ್ಯಾನ್ ಮಾಡಲಾಗುತ್ತದೆ.
7. ಮೊದಲು ಎಡಗೈ ಬೆರಳುಗಳು, ನಂತರ ಬಲಗೈ ಬೆರಳುಗಳು, ತದ ನಂತರ ಎರಡೂ ಹೆಬ್ಬೆಟ್ಟು ಹೀಗೆ ಹತ್ತೂ ಬೆರಳುಗಳ ಬೆರಳಚ್ಚು ಸಂಗ್ರಹಿಸಿ ಬಯೋಮೆಟ್ರಿಕ್‌ಗೆ ಅಳವಡಿಸಲಾಗುತ್ತದೆ.
8. ನಂತರ ತಾತ್ಕಾಲಿಕ ಸ್ವೀಕೃತಿ ಪತ್ರ ನೀಡಲಾಗುತ್ತದೆ.
9. 30 ರಿಂದ 90 ದಿನಗಳೊಳಗೆ ಆಧಾರ್ ಕಾರ್ಡ್ ಸ್ಪೀಡ್ ಪೋಸ್ಟ್ ಮೂಲಕ ಮನೆ ಬಾಗಿಲಿಗೆ ತಲುಪಿಸಲಾಗುತ್ತದೆ.

## ಏನು ದಾಖಲೆ ಬೇಕು ?

i) ಗುರುತಿನ ದಾಖಲೆ, ii) ವಿಳಾಸ ದಾಖಲೆ ಹಾಗೂ iii) ಜನನ ದಿನಾಂಕ ದಾಖಲೆಗಳ ಮೂಲ ಪ್ರತಿಯೊಡನೆ ಒಂದೊಂದು ಜೆರಾಕ್ಸ್ ಪ್ರತಿ ಬೇಕು. ಜೆರಾಕ್ಸ್ ಪ್ರತಿಗಳನ್ನು A4 ಸೈಜಿನಲ್ಲಿ ಮಾಡಬೇಕು.

***ರಹಸ್ಯವನ್ನು ಮುಚ್ಚಿಡಿ ಅದು ನಿಮ್ಮ ಗುಲಾಮ, ರಹಸ್ಯವನ್ನು ಬಯಲು ಮಾಡಿ ಅದು ನಿಮ್ಮ ಯಜಮಾನ–ವಿಲ್ ಹೆನ್ರಿ***



- ಗುರುತಿನ ದಾಖಲೆಗಾಗಿ ಹೆಸರು ಮತ್ತು ಭಾವಚಿತ್ರವಿರುವ ದಾಖಲೆ ನೀಡಬಹುದು.
- ವಿಳಾಸದ ದಾಖಲೆಗಾಗಿ ಹೆಸರು ಮತ್ತು ವಿಳಾಸ ವಿರುವ ಯಾವುದಾದರೊಂದು ದಾಖಲೆ ನೀಡಬಹುದು.
- ಜನನ ದಿನಾಂಕ ದಾಖಲೆಗಾಗಿ ಹೆಸರು ಮತ್ತು ಜನನ ದಿನಾಂಕ ಇರುವ ಯಾವುದೇ ದಾಖಲೆ ನೀಡಬಹುದು (ಜನನ ಪ್ರಮಾಣ ಪತ್ರ, ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಪಾಸ್ ಪುಸ್ತಕ ಗೆಜೆಟ್ ಅಫೀಸರ್ ನೀಡುವ ಪ್ರಮಾಣ ಪತ್ರ)

***ಚುನಾವಣಾ ಗುರುತಿನ ಚೀಟಿ (Voter ID) ಯಲ್ಲಿ ಮೇಲಿನ ಮೂರೂ ವಿಷಯಗಳು ಸಮರ್ಪಕ ವಾಗಿದ್ದಲ್ಲಿ, ಅದೊಂದೇ ದಾಖಲೆ ಸಾಕಾಗುತ್ತದೆ!***

### ನೀಡಬಹುದಾದ ದಾಖಲೆಗಳು :

ಚುನಾವಣಾ ಗುರುತಿನ ಚೀಟಿ, ಪಾಸ್ ಪೋರ್ಟ್, ಪಾನ್ ಕಾರ್ಡ್, ವಾಹನ ಚಾಲನಾ ಪರವಾನಗಿ, ಉದ್ಯೋಗ ಖಾತರಿ ಯೋಜನೆ ಕಾರ್ಡ್, ಭಾವಚಿತ್ರವುಳ್ಳ ಎಟಿಎಂ ಕಾರ್ಡ್/ ಕ್ರೆಡಿಟ್ ಕಾರ್ಡ್, ಪಿಂಚಣಿ ಕಾರ್ಡ್, ಸ್ವಾತಂತ್ರ್ಯ ಹೋರಾಟಗಾರರ ಕಾರ್ಡ್, ಕಿಸಾನ್ ಪಾಸ್ ಬುಕ್, ಸಿಜಿಎಚ್ಎಸ್ / ಇಸಿಹೆಚ್ಎಸ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ದೂರವಾಣಿ ಬಿಲ್, ಆಸ್ತಿ ತೆರಿಗೆ ರಶೀದಿ, ಎಲ್.ಐ.ಸಿ, ಅಂಗೀಕೃತ ಶಿಕ್ಷಣ ಸಂಸ್ಥೆಗಳು, ಬ್ಯಾಂಕ್ ಗಳು ಮತ್ತು ಕಂಪನಿಗಳ ಗುರುತಿನ ಪತ್ರ ಇತ್ಯಾದಿ.

### ದಾಖಲೆಗಳಿಲ್ಲದವರ ಪಾಡೇನು ?

ವಿಳಾಸ ಮತ್ತು ಗುರುತಿನ ಯಾವುದೇ ದಾಖಲೆಗಳಿಲ್ಲದಿದ್ದರೆ, ಈಗಾಗಲೇ ಆಧಾರ್ ಸಂಖ್ಯೆ ಪಡೆದಿರುವ ಸ್ಥಳೀಯ ಜನಪ್ರತಿನಿಧಿಗಳು, ಪಾಲಿಕೆ ಸದಸ್ಯರು, ಗ್ರಾ.ಪಂ.ಸದಸ್ಯರು, ಇತ್ಯಾದಿಗಳ ಶಿಫಾರಸ್ಸು ಪತ್ರದ ಮೇರೆಗೆ ಆಧಾರ್ ಕಾರ್ಡ್ ನೀಡಲಾಗುತ್ತದೆ.

### ಯಾರ್ಯಾರು ನೋಂದಣಿ ಮಾಡಿಸಬೇಕು ?

- ನವಜಾತ ಶಿಶುವಿನಿಂದ ವಯೋವೃದ್ಧರವರೆಗೆ ಎಲ್ಲರೂ ನೋಂದಣಿ ಮಾಡಿಸಬೇಕು.
- ಮೂರು ವರ್ಷದ ಕೆಳಗಿನ ಮಕ್ಕಳ ಬೆರಳಚ್ಚು ಹಾಗೂ ಅಕ್ಷಿ ಪಟಲ ಸ್ಕ್ಯಾನ್ ಮಾಡಲಾಗುವುದಿಲ್ಲ. ಅದರೆ ಅವರ ವಿವರಗಳನ್ನು ಪೋಷಕರ ಕಾರ್ಡ್‌ನೊಳಗೆ ಸೇರಿಸಲಾಗುತ್ತದೆ. ಅವರಿಗೆ 5 ವರ್ಷವಾಗುವಾಗ ಸ್ಕ್ಯಾನ್ ಮಾಡಿಸಿಕೊಳ್ಳಬೇಕು.
- 5 ರಿಂದ 15 ವರ್ಷದ ವರೆಗಿನ ಮಕ್ಕಳ ಬೆರಳಚ್ಚು ಹಾಗೂ ಅಕ್ಷಿ ಪಟಲ ಸ್ಕ್ಯಾನ್ ಮಾಡಿ 'ಆಧಾರ್ ಕಾರ್ಡ್' ನೀಡಲಾಗುತ್ತದೆ. ಆದರೆ, ಅವರಿಗೆ 15 ವರ್ಷ ತುಂಬುವಾಗ ಮತ್ತೆ ಸ್ಕ್ಯಾನ್ ಮಾಡಿಸಿಕೊಳ್ಳಬೇಕು.

***ಆಧಾರ್ ಕಾರ್ಡ್ ಪಡೆಯಲು ಯಾವುದೇ ಶುಲ್ಕವಿರುವುದಿಲ್ಲ, ಸಂಪೂರ್ಣ ಉಚಿತ! ಒಂದು ನೋಂದಣಿ ಕಛೇರಿಯಲ್ಲಿ ದಿನವೊಂದಕ್ಕೆ ಗರಿಷ್ಟ 40 ರಿಂದ 50 ಮಂದಿಯ ನೋಂದಣಿ ಮಾತ್ರ ಮಾಡಿಸಲಾಗುತ್ತಿದೆ. ಇದಕ್ಕೆ ಕೊನೆಯ ದಿನಾಂಕವೆಂಬುವುದಿಲ್ಲ, ಇದು ನಿರಂತರ ಪ್ರಕ್ರಿಯೆ. ಆದುದರಿಂದ ಯಾವುದೇ ಒತ್ತಡಗಳಿಲ್ಲದೆ ಅದನ್ನು ಮಾಡಿಸಬಹುದು. ಆದರೆ ಅದರಿಂದ ಅಗಾಧ ಉಪಯೋಗಗಳಿರುವುದರಿಂದ ಆದಷ್ಟು ಬೇಗನೆ ನೋದಣಿ ಮಾಡಿದರೆ ಒಳಿತು.***


***ಇದುವೇ ಆಧಾರ್ ಸಮಾಚಾರ್! ಅಂಚೆ ಕಛೇರಿಗೆ ಹೋಗಿರಿ, ಆಧಾರ್ ಕಾರ್ಡ್ ಪಡೆಯಿರಿ!***




*ದೇವರಾಜ, 7ನೇ ತರಗತಿ*
*ಸ.ಹಿ.ಪ್ರಾ.ಶಾಲೆ, ಪೋತ್ನಾಳ*



*ಪಾರ್ವತಿ, ಸ.ಹಿ.ಪ್ರಾ.ಶಾ. ಬೆಳವಾಟ*




*ಮುದ್ದಯ್ಯ, 5ನೇ ತರಗತಿ*
*ಸ.ಹಿ.ಪ್ರಾ.ಶಾಲೆ, ಬೆಳವಾಟ*




*ಜಯಂತಿ*
*5ನೇ ತರಗತಿ*
*ಸ.ಹಿ.ಪ್ರಾ.ಶಾಲೆ*
*ಈರಲಗಡ್ಡಿ*




***ತನ್ನನ್ನು ತಾನೇ ಕ್ಷಮಿಸಿಕೊಳ್ಳುವವನು, ತನ್ನನ್ನು ತಾನೇ ನಿಂದಿಸಿಕೊಳ್ಳುತ್ತಾನೆ. —ಗ್ಯಾಬ್ರಿಯಲ್ ಮ್ಯುರಿಯರ್***



ರತ್ನಮ್ಮ, 5ನೇ ತರಗತಿ, ಸ.ಹಿ.ಪ್ರಾ.ಶಾಲೆ, ದೋತರಬಂಡಿ




ಅನ್ನಪೂರ್ಣ ವಿ.ಎಮ್.
7ನೇ ಕ್ಲಾಸ್, ಸ.ಹಿ.ಪ್ರಾ.ಶಾಲೆ, ಮರಕಂದಿನ್ನಿ




ಲಕ್ಷ್ಮೀ, 5ನೇ ತರಗತಿ
ಮುದ್ದಮಗುಡ್ಡಿ



ನರಸರೆಡ್ಡಿ, 5ನೇ ತರಗತಿ
ಸ.ಕ್ರಿ.ಪ್ರಾ. ಶಾಲೆ, ಈರಲಗಡ್ಡಿ




ಶಿವು, 2ನೇ ತರಗತಿ
ಸ.ಹಿ.ಪ್ರಾ.ಶಾಲೆ, ಬೆಳವಾಟ



ಶ್ರೀದೇವಿ, ಸ.ಹಿ.ಪ್ರಾ. ಶಾಲೆ, ಮರಕಮದಿನ್ನಿ




ಮರಿಯಪ್ಪ, ಸ.ಹಿ.ಪ್ರಾ.ಶಾಲೆ,
ಮುದ್ದಮಗುಡ್ಡಿ



ಶೈನಾಜಬೇಗಂ
6ನೇ ತರಗತಿ, ಸ.ಹಿ.ಪ್ರಾ.ಶಾಲೆ, ಪೋತ್ನಾಳ್



ಬಸವಲಿಂಗ, 5ನೇ ತರಗತಿ,
ಸ.ಕ್ರಿ.ಪ್ರಾ.ಶಾಲೆ, ಬೆಳವಾಟ




ಲಕ್ಷ್ಮಮ್ಮ, 5ನೇ ತರಗತಿ,
ಈರಲಗಡ್ಡಿ


ಅಜ್ಞಾನ ಭಯದ ಉಗಮ ಬಿಂದು –ರಾಲ್ಫ್ ಡಬ್ಲೂ ಎಮರ್ಸನ್



ಹಬಬಸಾಬ, 5ನೇ ತರಗತಿ




ಎಂ. ಅನುಪಮ, 4ನೇ ತರಗತಿ ಪೋತ್ನಾಳ



ಎಸ್. ಪಿ. ಧನುಷ್, 3ನೇ ತರಗತಿ, ಪೋತ್ನಾಳ್



ಸಿದ್ದೇಶ, 4ನೇ ತರಗತಿ, ಮಲ್ಕಾಪುರ



ಆನಂದರಾಜ, 5ನೇ ತರಗತಿ,
ಸ.ಹಿ.ಪ್ರಾ. ಶಾಲೆ, ಉಟಕನೂರು



ಪ್ರತಿಭೆ ಎಂದರೆ ಆಗೊಮ್ಮೆ – ಈಗೊಮ್ಮೆ ಮಿಂಚಿ ಮರೆಯಾಗುವ ಬೆಳಕು. –ಪರಮೇಶ್ವರ ಭಟ್ಟ




ಬಸವ ಲಿಂಗಪ್ಪ, ಸ.ಹಿ.ಪ್ರಾ. ಶಾಲೆ, ಮರಕಂದಿನ್ನಿ





ಶಾರದಾ, 5ನೇ ತರಗತಿ, ಸ.ಕ್ರಿ.ಪ್ರಾ.ಶಾಲೆ, ದೋತರಬಂಡಿ

ವೇಣುಗೋಪಾಲ, ಸ.ಹಿ.ಪ್ರಾ.ಶಾಲೆ, ಬೆಳವಾಟ



ಅಶ್ವಿನಿ, 5ನೇ ತರಗತಿ
ಮಲ್ಲಾಪುರ





ರಮೇಶ್ ರಾಘವೇಂದ್ರ, 7ನೇ ತರಗತಿ, ಸ.ಹಿಪ್ರಾ.ಶಾಲೆ



ಹುಸೇನ ಭಾಷಾ, 5ನೇ ತರಗತಿ
ದೋತರ್ ಂಡಿ



ಬಸವಲಿಂಗಮ್ಮ ಯು., 6ನೇ ತರಗತಿ
ಸ.ಹಿ.ಪ್ರಾ.ಶಾಲೆ, ಮಲ್ಲಾಪುರ

ನಿಮ್ಮ ಗುರಿ ನಿಮಗೆ ದಾರಿ ತೋರಿಸುತ್ತಾ ಮುನ್ನಡೆಸುತ್ತದೆಯೇ ಹೊರತು, ಅನ್ಯರಿಂದ ಅದು ಸಾಧ್ಯವಿಲ್ಲ. –ಮಿಕೇಲ್ ಕೇಲಿನ್



# ವಿಮುಕ್ತಿ ಗೀತೆ

೧. ಹಬಲರಲ್ಲ ಸಬಲರೂ ನಾವೆಲ್ಲ
ನಗು ನಗುತಾ ಬಾಳಬೇಕು ನಮಗೆಲ್ಲ ‖೨‖
ಮಕ್ಕಳ ಸಂಘವು ನಮ್ಮದು
ಪ್ರೀತಿ ಧೈರ್ಯ ನಮಗಿಲ್ಲಿ ಸಿಗುವುದು !! ಪಲ್ಲವಿ!!

ವಿಮುಕ್ತಿ ನಮ್ಮ ಶಕ್ತಿ ಸಾರಥಿ
ಮೂಡಿಸುವುದು ನಮ್ಮಲ್ಲಿ ಜಾಗೃತಿ ‖೨‖
ವಿಮುಕ್ತಿ ನಮ್ಮ ಶಕ್ತಿ ಸಾರಥಿ
ದುಡಿಯುವುದು ಬಯಸಿ ನಮ್ಮ ಏಳ್ಗೆ ಉನ್ನತಿ

೨. ಎದ್ದು ಗೆದ್ದು ಬದುಕುವ ಛಲವಿದೆ
ಸ್ವಾಭಿಮಾನ ನಂಬಿಕೆಯ ಬಲವಿದೆ ‖೨‖
ಛಲದಲಿ ಜಗದಲಿ ಮುಂದಾಗಿ
ಸಾಧನೆ ಮಾಡಬೇಕು ಒಂದಾಗಿ

Coda: ವಿಮುಕ್ತಿ ಮಕ್ಕಳ ಸಂಘವು
ಮಕ್ಕಳ ಬಾಳಿಗೆ ಸ್ಪೂರ್ತಿ ಕಿರಣವು

**ಸಾಹಿತ್ಯ ಸಂಗೀತ : ವಂ। ಸ್ವಾ। ಪೌಲ್ ಮೆಲ್ವಿನ್ ಕಾಪುಚಿನ್**

---

# ಸಂಬಂಧಗಳು ಉತ್ತಮವಾಗಿರಲಿ

ಮನೆಯ ಒಳಗೆ ಹಾಗೂ ಹೊರಗೆ ಸಂಬಂಧಗಳನ್ನು ಹೆಚ್ಚಿಸಿಕೊಳ್ಳಲು ಮತ್ತು ಧೃಡಪಡಿಸಿಕೊಳ್ಳಲು ಸುಲಭ ಸೂತ್ರಗಳು

- ನಾನೇ ದೊಡ್ಡವನು, ನಾನೇ ಹೆಚ್ಚು ತಿಳಿದವನು, ನನಗಿಂತ ಉತ್ತಮವಾದವರು ಇಲ್ಲ ಎನ್ನುವ ಆಹಂಕಾರ ಬಿಡಿ.
- ಮುಂದೆ ಆಗುವ ಪರಿಣಾಮವನ್ನು ಯೋಚಿಸದೆ, ವಿಷಯಕ್ಕೆ ಸಂಬಂಧಿಸದ, ಅರ್ಥವಿಲ್ಲದ ಮಾತುಗಳನ್ನಾಡಬೇಡಿ.
- ನಾನು ಸರಿ; ನಾನು ಹೇಳುವುದು ಸರಿ; ನಾನು ಮಾಡಿದ್ದೇ ಸರಿ; ಎಂದು ವಾದಮಾಡಬೇಡಿ.
- ಸಂಬಂಧ ಪಡದವರ ಜೊತೆಯಲಿ ಸಂಬಂಧ ಪಡದ ವಿಷಯ ಮಾತನಾಡಬೇಡಿ.
- ಮಿತಿಗಿಂತ ಅತಿಯಾಗಿ ಅವಶ್ಯಕ್ಕಿಂತ ಅಧಿಕವಾಗಿ ಆಸೆ ಪಡಬೇಡಿ.
- ಬೇರೆಯವರ ಕೆಲಸಗಳನ್ನು ಮತ್ತು ಅಭಿಪ್ರಾಯಗಳನ್ನು ತಪ್ಪಾಗಿ ಅರ್ಥಮಾಡಿಕೊಳ್ಳಬೇಡಿ.
- ಆಸಭ್ಯವಾಗಿ ಮಾತನಾಡುವುದು ಮತ್ತು ಅಸಭ್ಯವಾಗಿ ನಡೆದುಕೊಳ್ಳುವುದನ್ನು ಬಿಡಿ.
- ನಾಟಕೀಯವಾಗಿ ಮಾತನಾಡುವುದು ಹಾಗೂ ನಾಟಕೀಯವಾಗಿ ನಡೆದುಕೊಳ್ಳುವುದನ್ನು ಬಿಡಿ.
- ಸಮಸ್ಯೆಗಳು ಎದುರಾದಾಗ ಸೂಕ್ಷ್ಮವಾಗಿ ಪರಿಹಾರ ಹುಡಿಕಿಕೊಳ್ಳಿ, ಹೊಂದಾಣಿಕೆ ಮಾಡಿಕೊಳ್ಳಿ, ನನ್ನದೆ ನಡೆಯಬೇಕೆಂಬ ಹಠ ಹಿಡಿಯಬೇಡಿ.
- ಕಷ್ಟಗಳಿಂದ ಸಂಪೂರ್ಣವಾಗಿ ತಪ್ಪಿಸಿಕೊಳ್ಳಲಾಗುವುದಿಲ್ಲ; ಅವುಗಳು ಸಹಜ ಎಂದು ಒಪ್ಪಿಕೊಂಡು ಅವುಗಳನ್ನು ಅನುಭವಿಸಲು ಮಾನಸಿಕವಾಗಿ ಸಿದ್ದರಾಗಿರಿ.
- ನೀವು ಕೇಳಿದ ವಿಷಯ ಸತ್ಯವೋ, ಸುಳ್ಳೋ ಎಂದು ವಿಮರ್ಶೆ ಮಾಡದೆ ಇಲ್ಲಿ ಕೇಳಿದ್ದನ್ನು ಅಲ್ಲಿ ಹೇಳಬೇಡಿ.
- ನಗುನಗುತ ಪ್ರಿಯವಾಗಿ, ಮಿತವಾಗಿ, ಇತರರನ್ನು ಮಾತನಾಡಿಸಿ.
- ಆಡುವ ಮಾತುಗಳನ್ನು ಸರಳವಾಗಿ, ನೇರವಾಗಿ, ಮನ ಪೂರ್ವಕವಾಗಿ ಮಾತನಾಡಿ.
- ಎಲ್ಲರನ್ನು ಗೌರವದಿಂದ ನೋಡಿ; ಬೇರೆಯವರ ಅಭಿಪ್ರಾಯವನ್ನು ಗೌರವಿಸಲು ಕಲಿಯಿರಿ.
- ಸಮಸ್ಯೆಗಳು ಏರ್ಪಟ್ಟಾಗ ಮತ್ತೊಬ್ಬರು ಇಳಿದು ಬರಲಿ ಎಂದು ಕಾಯದೇ ಮಾತನಾಡಲು ನೀವೆ ಮುಂದೆ ಬನ್ನಿ.
- ಇತರರ ಅಲ್ಪ ದೋಷವನ್ನು ಸಹ ದೊಡ್ಡದು ಮಾಡಬೇಡಿ.
- ಪ್ರತಿಯೊಬ್ಬರನ್ನು ಅವರವರ ಲೋಪದೋಷಗಳೊಂದಿಗೆ ಸೇರಿಸಿ ಗೌರವಿಸುವುದನ್ನು ಕಲಿಯಿರಿ.

**ದೋಷಗಳು ಆಳಿಯಲಿ..........ಗುಣಗಳು ಬೆಳೆಯಲಿ........ ಸಂಬಂಧ ಧೃಡವಾಗಿರಲಿ**

ಸಂಗ್ರಹ



***ಪುಸ್ತಕದ ಪ್ರಥಮ ಅಧ್ಯಾಯವೇ ಪ್ರಾಮಾಣಿಕತೆ. – ಥಾಮಸ್ ಜೆಫರ್‌ಸನ್***

